
ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

17–05–2024 – ಶುಕ್ರವಾರ

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವ ಫಾಲಣಿ |
| ಯೋಗ | : ವ್ಯಾಘಾತ |
| ಕರಣ | : ಕೌಳವ |
| ಸೂರ್ಯೋದಯ | : 05:46:04 |
| ಸೂರ್ಯಾಸ್ತ | : 19:00:53 |
| ರಾಹು | : 10:44–12:23 |
| ಯಮಘಂಡ | : 15:42–17:22 |
| ಗುಳಿಕ | : 07:25–09:05 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 16–05–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.58 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.408 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1578.02 ಅಡಿ |
| ಒಳ ಹರಿವು | 1883 ಕ್ಯುಸೆಕ್ |
| ಹೊರ ಹರಿವು | 217 ಕ್ಯುಸೆಕ್ |
| ಸಾಮರ್ಥ್ಯ | 3.580 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Join for vijayanagara dist. updates

# ಸರ್ಕಾರಿ ಸೌಲಭ್ಯ ಪಡೆದು ಸ್ವಾವಲಂಬಿ ಜೀವನ ನಡೆಸಿ

## ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಯೋಜನಾಧಿಕಾರಿ ರಾಮಕೃಷ್ಣ ನಾಯಕ್ ಹೇಳಿಕೆ



**ಹಂಪಿ ಟೈಮ್ಸ್ ಬಳ್ಳಾರಿ**

ಸರ್ಕಾರವು ವಿಕಲಚೇತನರ ಅಭಿವೃದ್ದಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಯೋಜನೆಗಳ ಅರಿವು ಹೊಂದುವ ಮೂಲಕ ವಿಕಲಚೇತನರು ವಿವಿಧ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸ್ವಾವಲಂಬಿ ಜೀವನ ನಡೆಸಬೇಕು ಎಂದು ಮಹಿಳಾ ಮತ್ತು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಯೋಜನಾಧಿಕಾರಿ ರಾಮಕೃಷ್ಣ ನಾಯಕ್ ಅವರು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಪುನರ್ವಸತಿ ಕೇಂದ್ರ ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಸರ್ಕಾರಿ ಕಿವುಡು ಮಕ್ಕಳ ಪಾಠಶಾಲೆ ಆವರಣದಲ್ಲಿ ಗುರುವಾರ ಏರ್ಪಡಿಸಿದ್ದ ವಿಶ್ವ ಸುಲಭ ಲಭ್ಯತೆ ವಿಶ್ವ ಜಾಗೃತಿ ಅರಿವು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಅಂಗವಿಕಲರ ಕಾಯ್ದೆ–2016 ರ ಸುಲಭ ಲಭ್ಯತೆಯ ಉಪಬಂದಗಳು 40–46 ರವರೆಗಿನ ನಿಯಮಗಳ ಬಗ್ಗೆ ಅರಿವು ಹೊಂದಿ ವಿಶೇಷಚೇತನರು ಸರಕಾರದ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವ ಭಾರತಿ ಕಲಾನಿಕೇತನ ಸಂಸ್ಥೆಯ ಆಡಳಿತಾಧಿಕಾರಿ ಗುರುಮೂರ್ತಿ, ಕುರುಗೋಡು ಸ್ಮೈಲ್ ಸಂಸ್ಥೆಯ ಪಣಿರಾಜ, ಅನುಗ್ರಹ ಫೌಂಡೇಷನ್ ಟ್ರಸ್ಟ್ ಸಿಸ್ಟರ್ ಲಿಯೋನ, ಜಿಲ್ಲಾ ಪುನರ್ವಸತಿ ಕೇಂದ್ರದ ನಾಗೇಂದ್ರ, ಜಿಲ್ಲೆಯ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯರ್ತರಾದ ಸಿ.ರಾಣಿ ಸಾಬೇಶ್, ಕರಿಬಸಜ್ಜ, ರೇವಣ್ಣ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಗ್ರಾಮೀಣ, ನಗರ ಪುನರ್ವಸತಿ ಕಾರ್ಯಕರ್ತರು ಹಾಗೂ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಕ್ರಮ ಪಡಿತರ ಅಕ್ಕಿ ದಾಸ್ತಾನು ವಶ



**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಹೊರವಲಯದಲ್ಲಿನ ಗುಗ್ಗರಹಟ್ಟಿಯ ನ್ಯಾಯಬೆಲೆ ಅಂಗಡಿ 115 ರ ಬದಿಯಲ್ಲಿ ಅಕ್ರಮವಾಗಿ ದಾಸ್ತಾನಿರಿಸಿದ್ದ ಸುಮಾರು 750 ಚೀಲ ಪಡಿತರ ಅಕ್ಕಿಯನ್ನು ಆಹಾರ ಇಲಾಖೆಯು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ವಶಪಡಿಸಿಕೊಂಡು ಮುಂದಿನ ಅಗತ್ಯ ಕ್ರಮ ವಹಿಸಿದೆ. ವಶಪಡಿಸಿಕೊಳ್ಳಲಾದ ಪಡಿತರ ಅಕ್ಕಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು, ಸಂಬಂಧಿಸಿದ ನ್ಯಾಯಬೆಲೆ ಅಂಗಡಿಯ ಪರವಾನಿಗೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಆಹಾರ ಇಲಾಖೆಯ ಆಹಾರ ನಿರೀಕ್ಷಕರು, ಸಿಬ್ಬಂದಿ ಒಟ್ಟುಗೂಡಿ ಈ ಕಾರ್ಯಾಚರಣೆ ಮಾಡಲಾಗಿದ್ದು, ಅಕ್ರಮ ಪಡಿತರ ಅಕ್ಕಿಯನ್ನು ಸಾಗಾಣೆ ಮಾಡುತ್ತಿದ್ದ ಲಾರಿಯನ್ನು ಬಳ್ಳಾರಿ ನಗರದ ಎಪಿಎಂಸಿ ವ್ಯಾಪ್ತಿಯಲ್ಲಿ ವಶಪಡಿಸಿಕೊಂಡು ಎಫ್‌ಐಆರ್ ದಾಖಲಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಹಾಗೂ ಆಹಾರ ಇಲಾಖೆ ಉಪನಿರ್ದೇಶಕಿ ಸಕೀನಾ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಬಡ ಜನರಿಗೆ ತಲುಪಬೇಕಾದ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಣೆ ಮಾಡುವವರಿಗೆ ಇದು ಆಹಾರ ಇಲಾಖೆಯ ಈ ಕ್ರಮ ಎಚ್ಚರಿಕೆಯ ಸಂದೇಶವಾಗಿದೆ.

# ನರೇಗಾ ಕಾಮಗಾರಿ: ಜಿಪಂ ಸಿಇಒ ವಿವಿಧೆಡೆ ಭೇಟಿ, ವೀಕ್ಷಣೆ

**ಹಂಪಿ ಟೈಮ್ಸ್ ಬಳ್ಳಾರಿ**

ತಾಲ್ಲೂಕಿನ ವಿವಿಧ ಗ್ರಾಮಗಳ ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಗುರುವಾರ ವೀಕ್ಷಣೆ ಮಾಡಿದರು.

ಬಳ್ಳಾರಿ ತಾಲ್ಲೂಕಿನ ಬೈರದೇವನಹಳ್ಳಿ ಗ್ರಾಮದಲ್ಲಿ ಕೈಗೊಂಡಿರುವ ಸಿಸಿ ಚರಂಡಿ ಕಾಮಗಾರಿ ವೀಕ್ಷಣೆ ನಡೆಸಿ, ಕಾಮಗಾರಿ ಗುಣಮಟ್ಟತೆ ಕಾಯ್ದುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಬಳಿಕ ಶಿವಪುರ ಗ್ರಾಮದಲ್ಲಿ ಅರಣ್ಯ ಇಲಾಖೆಯ ನರ್ಸರಿ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೋಕಾದಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿ ವೀಕ್ಷಿಸಿದರು.



ನಂತರದಲ್ಲಿ ಕಾರೇಕಲ್ಲು ಗ್ರಾಮದಲ್ಲಿ ಕೃಷಿ ಇಲಾಖೆಯ ಬದು ಮತ್ತು ಕೃಷಿ ಹೊಂಡ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದರು. ಶಿಡಿಗಿನಮೋಳ ಮತ್ತು ಮೀನಹಳ್ಳಿ ಗ್ರಾಮದಲ್ಲಿ ಶಾಲಾ ಕಾಂಪೌಂಡ್ ನಿರ್ಮಾಣ, ಪರಮದೇವನಹಳ್ಳಿ ಗ್ರಾಮದಲ್ಲಿ ಸ್ಮಶಾನ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು.

ಈ ವೇಳೆ ಬಳ್ಳಾರಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಡಗಿನ ಬಸಪ್ಪ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಹಾಯಕ ನಿರ್ದೇಶಕ ಬಸವರಾಜ ಸೇರಿದಂತೆ ಅನುಷ್ಠಾನ ಇಲಾಖೆಯ ಅಧಿಕಾರಿಗಳು, ಟಿಸಿ, ಟಿಐಇಸಿ, ಟಿಎಂಐಎಸ್, ಪಿಡಿಒ, ಟಿಎಇ, ಡಿಇಒ, ಬಿಎಫ್‌ಟಿ, ಗ್ರಾಮ ಕಾಯಕ ಮಿತ್ರರು ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು.

# ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಸ್ಟ್ರಾಂಗ್ ರೂಂ ಗೆ ಭೇಟಿ, ಪರಿಶೀಲನೆ

**ಹಂಪಿ ಟೈಮ್ಸ್ ಕೊಪ್ಪಳ**

ಭಾರತ ಚುನಾವಣಾ ಆಯೋಗದ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಕೂರ್ಮಾರಾವ್ ಎಂ. ಅವರು ಗುರುವಾರದಂದು ನಗರದ ಗವಿಸಿದ್ದೇಶ್ವರ ಮಹಾವಿದ್ಯಾಲಯದ ಸ್ಟ್ರಾಂಗ್ ರೂಂ ಗೆ ಭೇಟಿ ನೀಡಿದರು.

ಸ್ಟ್ರಾಂಗ್ ರೂಂ ಭದ್ರತೆ, ಸಿಸಿ ಕ್ಯಾಮೆರಾಗಳ ಕಾರ್ಯನಿರ್ವಹಣೆ, ಭದ್ರತಾ ಸಿಬ್ಬಂದಿಗಳ ಕುರಿತು ಪರಿಶೀಲಿಸಿದ ಅವರು ಹೆಚ್ಚಿನ ಭದ್ರತೆಗಾಗಿ ಇನ್ನೂ ಹೆಚ್ಚಿನ ಸಿಸಿ ಕ್ಯಾಮೆರಾ ಅಳವಡಿಸಲು ಸೂಚಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿ ಸಾವಿತ್ರಿ ಬಿ.ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಡಿಎಸ್‌ಪಿ ಮುತ್ತಣ್ಣ ಸವರಗೋಳ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಜ್ಞಾನ

# ಚಳಿಗಾಲದ ಸೂರ್ಯ ಯಾಕೆ ತಂಪಾಗಿರುತ್ತಾನೆ?

**ಆರ್.ಬಿ.ಗುರುಬಸವರಾಜ**

ಶನಿವಾರ ಬೆಳಗಿನ ಶಾಲೆಗೆ ಹೋಗಲು ಪವನ ಸಿದ್ದವಾಗುತ್ತಿದ್ದ. ಚಳಿಗಾಲವಾದ್ದರಿಂದ ತುಂಬಾ ಚಳಿ ಇತ್ತು. ಸ್ನಾನ ಮಾಡಿದ್ದರಿಂದ ಮತ್ತಷ್ಟು ಚಳಿ ಆಗುತ್ತಿತ್ತು. ನಡುಗುತ್ತಲೇ ಶಾಲೆ ಕಡೆಗೆ ಹೆಜ್ಜೆ ಹಾಕಿದ. ಈ ಸೂರ್ಯ ಚಳಿಗಾಲದಲ್ಲೇ ಏಕೆ ತಂಪಾಗಿರುತ್ತಾನೆ ಎಂದುಕೊಳ್ಳುತ್ತಾ ಶಾಲೆ ತಲುಪಿದ. ಶಾಲೆಯಲ್ಲಿ ಈ ಬಗ್ಗೆ ಶಿಕ್ಷಕರನ್ನು ಕೇಳಿದ. ಅವರ ಉತ್ತರ ಹೀಗಿದೆ.

ಬೇಸಿಗೆಗೆ ಹೋಲಿಸಿದರೆ ಚಳಿಗಾಲದಲ್ಲಿ ಸೂರ್ಯನ ಶಾಖ ಕಡಿಮೆ ಇರುತ್ತದೆ ಎಂದು ಭಾವಿಸುತ್ತೇವೆ. ಇದು ತಪ್ಪು. ಆದರೆ ವಾಸ್ತವದಲ್ಲಿ ಚಳಿಗಾಲದಲ್ಲಾಗಲೀ, ಮಳೆಗಾಲದಲ್ಲಾಗಲೀ ಸೂರ್ಯನ ಶಾಖ



ಕಡಿಮೆಯಾಗುವುದಿಲ್ಲ. ಎಲ್ಲಾ ಕಾಲದಲ್ಲೂ ಒಂದೇ ರೀತಿಯಲ್ಲಿರುತ್ತದೆ. ಸೂರ್ಯನು ಪರಮಾಣು ಪ್ರತಿಕ್ರಿಯೆಗಳಿಂದ ಶಾಖ ಉಂಟುಮಾಡುವ ಒಂದು ದೈತ್ಯ ಬೆಂಕಿಯ ಚೆಂಡು. ಸೂರ್ಯನ ಮೇಲ್ಮೈಯು ವರ್ಷಪೂರ್ತಿ ಸುಮಾರು 5500 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಸೂರ್ಯನ ಉಷ್ಣತೆಯು ನಿರಂತರವಾಗಿ ಎಲ್ಲಾ ದಿಕ್ಕುಗಳಲ್ಲಿ ಅತ್ಯದ್ಭುತ ಪ್ರಮಾಣದ ಉಷ್ಣ ವಿಕಿರಣವನ್ನು ಹೊರಸೂಸುವಂತೆ ಮಾಡುತ್ತದೆ. ಹೆಚ್ಚಾಗಿ ಅತಿಗೆಂಪು ಅಲೆಗಳು, ಗೋಚರ ಬೆಳಕು ಮತ್ತು ನೇರಳಾತೀತ ಅಲೆಗಳ ರೂಪದಲ್ಲಿ ಸೂರ್ಯನ ಉಷ್ಣವು ಹೊರಸೂಸುತ್ತದೆ. ಈ ವಿಕಿರಣವು ನಮ್ಮ ಸೌರವ್ಯೂಹದಾದ್ಯಂತ ಹರಡಿ ಎಲ್ಲವನ್ನೂ ಬೆಚ್ಚಗಾಗಿಸುತ್ತದೆ.

ಭೂಮಿಯು ಸೂರ್ಯನಿಂದ ದೂರದಲ್ಲಿರುವುದರಿಂದ ಚಳಿಗಾಲದಲ್ಲಿ ಭೂಮಿಯು ತಣ್ಣಗಾಗುತ್ತದೆ ಎಂದು ಕೆಲವರು ಭಾವಿಸುತ್ತಾರೆ. ಭೂಮಿಯು ಸೂರ್ಯನಿಂದ ಸುಮಾರು 150,000,000 ಕಿಲೋಮೀಟರ್ ದೂರದಲ್ಲಿದೆ. ಆದರೆ ಇದರಿಂದ ಚಳಿಗಾಲದಲ್ಲಿ ಸೂರ್ಯನ ಶಾಖ ಕಡಿಮೆಯಾಗುವುದಿಲ್ಲ. ಬದಲಾಗಿ ಭೂಮಿಯ ಓರೆಯು ಸೂರ್ಯನ ಬೆಳಕನ್ನು ದೊಡ್ಡ ಪ್ರದೇಶದಲ್ಲಿ ಹರಡಲು ಕಾರಣವಾಗುತ್ತದೆ. ಭೂಮಿಯು ತನ್ನ ಅಕ್ಷದಲ್ಲಿ 23 ಡಿಗ್ರಿಗಳಷ್ಟು ಓರೆಯಾಗಿದೆ. ಇದರಿಂದ ಬೇಸಿಗೆಯ ಸಮಯದಲ್ಲಿ ಉತ್ತರ ಗೋಳಾರ್ಧವು ಸೂರ್ಯನ ಕಡೆಗೆ ವಾಲುತ್ತದೆ ಮತ್ತು ಚಳಿಗಾಲದ ಸಮಯದಲ್ಲಿ ಉತ್ತರ ಗೋಳಾರ್ಧವು ಸೂರ್ಯನಿಂದ ದೂರಕ್ಕೆ ವಾಲುತ್ತದೆ. ಚಳಿಗಾಲದಲ್ಲಿ ಭೂಮಿಯ ಮೇಲಿನ ಆ ಸ್ಥಳವು ಸೂರ್ಯನಿಂದ ದೂರಕ್ಕೆ ವಾಲಿದಾಗ, ಸೂರ್ಯನು ಸಾಮಾನ್ಯವಾಗಿ ಆಕಾಶದಲ್ಲಿ ಕೆಳಗಿರುತ್ತದೆ ಮತ್ತು ಅದು ಕಡಿಮೆ ನೇರ ಸೂರ್ಯನ ಬೆಳಕನ್ನು ಪಡೆಯುತ್ತದೆ. ಕಡಿಮೆ ನೇರ ಸೂರ್ಯನ ಬೆಳಕು ಎಂದರೆ ಸೂರ್ಯನ ಬೆಳಕು ಕಡಿಮೆ ಕೋನದಲ್ಲಿ ಬರುತ್ತಿದೆ ಎಂದರ್ಥ. ಆದ್ದರಿಂದ ಭೂಮಿಯನ್ನು ಕಡಿಮೆ ಬಿಸಿ ಮಾಡುತ್ತದೆ. ಇದು ಶೀತ ಚಳಿಗಾಲಕ್ಕೆ ಕಾರಣವಾಗುತ್ತದೆ.

# 6 ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 6ನೇ ತರಗತಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಅರ್ಹತಾ ಪರೀಕ್ಷೆಯ ಮೂಲಕ ಪ್ರವೇಶ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದಿರಬೇಕು. ಅರ್ಜಿಗಳನ್ನು ಆಯಾ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ, ಅರ್ಜಿಗಳನ್ನು ಮೇ 21 ರೊಳಗೆ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ಮೊ.8548096468, 9986302091 ಹಾಗೂ ಆಯಾ ತಾಲ್ಲೂಕಿನ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ.ಕೆ ತಿಳಿಸಿದ್ದಾರೆ.

# ಮೇ 17ಕ್ಕೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯಲ್ಲಿ ಎಫ್–73 ಫೀಡರ್ ನಿರ್ವಹಣೆ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುರಿಂದ ಮೇ 17 ರಂದು ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಎಫ್–73 ಫೀಡರ್ ವ್ಯಾಪ್ತಿಯ ಬಸವನಕುಂಟೆ, ಕೋಟೆ ಪ್ರದೇಶ, 1 ನೇ ಗೇಟ್, 2 ನೇ ಗೇಟ್, ಸಿದ್ಧಾರ್ಥ ನಗರ, ಸುಧಾ ಕ್ರಾಸ್, ಓ.ಪಿ.ಡಿ ಸೇರಿದಂತೆ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಶೋಕ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA

**ಕವಿ ಮನಸು**

## ಬಿಸಿ ಬಿಸಿ ಚಾಯ




ಅಕ್ಕರೆಯಿಂದಲಿ ಸಕ್ಕರೆ ಮಿಶ್ರಿತ
ಸಿಕ್ಕರೆ ಬಿಡದಿರಿ ಬಿಸಿ ಚಾಯ
ಸುರಿಯುವ ಜಡಿಮಳೆ ಹೊರಗಡೆ ಬಿಡದಿರೆ
ನೆರವಿಗೆ ಬರುವುದು ಬಿಸಿ ಚಾಯ

ನಡುಗುವ ಚಳಿಯನು ತಡೆಯಲು ಬೇಕಿದೆ
ಕುಡಿಯಲು ಹಿತಕರ ಬಿಸಿ ಚಾಯ
ಕದಲದೆ ಕುಳಿತಿರೆ ನಿದಿರೆಯ ತಳ್ಳಲು
ಹದದಲಿ ಮಾಡಿದ ಬಿಸಿ ಚಾಯ

ಕರೆಯದೆ ಬರುವುದು ಶಿರದಲಿ ಚಿಂತೆಯೆ?
ಕೆರಳದೆ ಕುಡಿಯಿರಿ ಬಿಸಿ ಚಾಯ
ಅಕ್ಷಿಯ ಮೇಲ್ಗಡೆ ಕಕ್ಷೆಯ ಸಿಡಿತವ
ತಕ್ಷಣ ಕಳೆವುದು ಬಿಸಿ ಚಾಯ

ಶುಂಠಿಯ ಬೆರೆಸುತ ಗಂಟಲಿಗೆರೆಯುವ
ತುಂಟರು ಬಯಸುವ ಬಿಸಿ ಚಾಯ
ನಿಂಬೆಯು ಬೆರೆತರೆ ನಂಬದ ರುಚಿಯದು
ಜಂಭವ ತೋರುವ ಬಿಸಿ ಚಾಯ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ನಾವು ಹೀಗೆ

ನಾವು ಇರುವುದು ಹೀಗೆ
ನಮ್ಮ ಕಲ್ಪನೆ ಹಲವು ಬಗೆ
ನಿರಭಿಮಾನಿಗಳು ನಾವು
ಕಾಲು ಎಳೆಯುವ ಸ್ವಭಾವದವರು।

ನಾವು ನಮ್ಮವರು ಎನ್ನದವರು
ಮೇವು ಸಿಕ್ಕಕಡೆ ಹೋಗುವವರು
ಸ್ವಾಭಿಮಾನ ಕಿಂಚಿತ್ತು ಇಲ್ಲದವರು
ಪರ ಧನಕ್ಕೆ ಕಾದು ಕುಳಿತವರು।

ದೇಶ ಭಾಷೆ ಅರಿವು ಇಲ್ಲದವರು
ಪರದೇಶ ಧ್ವಜಕ್ಕೆ ಜೈ ಜೈ ಅಂದವರು
ಮಾತೃ ಭಾಷೆ ಬಿಟ್ಟು ಹೊರಟವರು
ನಮ್ಮನ್ನೆಂದು ಉದ್ದಾರ ಮಾಡನು ದೇವರು।

ನಾವೆಲ್ಲರೂ ಈ ದೇಶದವರು
ಕಲ್ಪನೆಯು ಇಲ್ಲದೆ ಮೂಡರು
ಅಲ್ಪ ಆಸೆಗೆ ಅಭಿಮಾನ ಬಿಟ್ಟವರು
ನಮ್ಮನ್ನು ನಾವೇ ಮಾರಿಕೊಂಡವರು।

ನಮ್ಮ ಜನ ನಮ್ಮ ಸಂಸ್ಕೃತಿ ಮರೆತವರು
ಅನ್ಯರಿಗೆ ಅನ್ಯ ದೇಶಕ್ಕೆ ಜೈ ಅಂದವರು
ಸ್ವಾಭಿಮಾನ ದೇಶಾಭಿಮಾನ ಅರಿಯದವರು
ಇನ್ನೊಬ್ಬರ ಚಾಕರಿಯಲಿ ಸುಖಪಡುವವರು।

ಇರಲಿ ಕಿಂಚಿತ್ತಾದರೂ ದೇಶಾಭಿಮಾನ
ಇರಲಿ ಕಿಂಚಿತ್ತಾದರೂ ನಮ್ಮವರ ಮಾನ
ಇರಲಿ ಅಲ್ಪವಾದರೂ ನಮ್ಮ ಸ್ವಾಭಿಮಾನ
ದುರ್ಬುದ್ದಿಯವರಾದರೆ ನಾಳೆ ನಾವು
ಪರಾಧೀನ।

– ಚಂದ್ರಶೇಖರಯ್ಯ ರೋಣದಮಠ




**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಭಾಷೆಗೆ ನಿಲುಕದ ಭಾವ



ಪ್ರತಿದಿನ ಮುಂಜಾನೆ ಯೋಗಾಸನದ ನಂತರ ಮನೆಯ ಮುಂದೆ ವಾಕ್ ಮಾಡುವುದು ನನ್ನ ರೂಢಿಯಾಗಿದೆ. ಇಂದು ಮುಂಜಾನೆ ನಾನು ವಾಕ್ ಮಾಡುತ್ತಿರುವಾಗ ಕಂಡ ಒಂದು ದೃಶ್ಯ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಪರಿಣಾಮ ಬೀರಿತು. ಭಾಷೆಗೆ ನಿಲುಕದ ಭಾವಗೀತೆಯ ಹಾಡಿದ ಅನುಭವವನ್ನು ಕಣ್ಣಾರೆ ಕಂಡಂತಾಯಿತು.

ಸಾಮಾನ್ಯವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಕೆಲವು ವರ್ಷಗಳ ಹಿಂದೆ ನಿಲ್ಲಿಸುವಂತೆ, ಗ್ರಾಹಕರ ಅಪೇಕ್ಷೆಯ ಮೇರೆಗೆ ಬೇಕು ಬೇಕಾದಲ್ಲಿ ಬಸ್ಸುಗಳನ್ನು ನಿಲ್ಲಿಸುವುದಿಲ್ಲವಷ್ಟೇ. ಆದರೆ ಇಂದು ಮುಂಜಾನೆ ನಮ್ಮ ಮನೆಯ ಮುಂದೆ ಹಾದು ಹೋಗುವ ರಾಜ್ಯ ಹೆದ್ದಾರಿಯಲ್ಲಿ ಸರ್ಕಾರಿ ಬಸ್ಸೊಂದು ಕೆಲ ಕ್ಷಣಗಳ ಕಾಲ ನಿಂತದ್ದು ನನ್ನ ಕುತೂಹಲಕ್ಕೆ ಕಾರಣವಾಯಿತು. ಯಾವುದೇ ಕಾರಣಕ್ಕೂ ನಡಿಗೆಯನ್ನು ನಿಲ್ಲಿಸದ ನಾನು ಗೇಟಿನೊಳಗಿನಿಂದಲೇ ನೋಡಿದಾಗ 60ರ ಆಸು ಪಾಸಿನ ವಯೋವೃದ್ಧನೊಬ್ಬನಿಗೆ ಬಸ್ಸಿನಲ್ಲಿದ್ದ ಬೇರೆ ಪ್ರಯಾಣಿಕರ ಸಹಾಯದಿಂದ ಹಸಿ ಮೆಣಸಿನಕಾಯಿಯನ್ನು ತುಂಬಿದ ಮೂರು ದೊಡ್ಡ ಚೀಲಗಳನ್ನು ಕೆಳಗಿಳಿಸಿ ಕೆಲವೇ ಸೆಕೆಂಡುಗಳಲ್ಲಿ ಆ ಬಸ್ಸು ಹೊರಟು ಹೋಯಿತು.

ತುಸು ಸೋಜಿಗದಿಂದಲೇ ಮನಸ್ಸಿನಲ್ಲಿ ಎಷ್ಟು ಒಳ್ಳೆಯ ಕೆಲಸ ಎಂದು ಯೋಚಿಸಿದೆ, ಜೊತೆಗೆ ವಯಸ್ಸಾದ ಅಜ್ಜ ಆ ಮೂರು ಚೀಲಗಳನ್ನು ಕೇವಲ ಅರವತ್ತೆಪ್ಪತ್ತು ಅಡಿ ದೂರದಲ್ಲಿರುವ ತರಕಾರಿ ಮಾರುಕಟ್ಟೆಗೆ ಹೇಗೆ ಒಯ್ಯುತ್ತಾನೆ ಎಂಬ ಕುತೂಹಲ ನನ್ನಲ್ಲಿ ಮೂಡಿತ್ತು. ಅಕಸ್ಮಾತ್ ಒಂದೊಂದೇ ಚೀಲವನ್ನು ಕೊಂಡೊಯ್ದು ಹಾಕಿ ಬರುವಾಗ ಯಾರಾದರೂ ಒಂದು ಚೀಲವನ್ನು ಲಪಟಾಯಿಸಿದರೆ ಎಂಬ ಅನಿಸಿಕೆ ಮೂಡಿ ನನ್ನ ಮರುಳುತನಕ್ಕೆ ನಾನೇ ಮನದಲ್ಲಿ ನಕ್ಕೆ.

ಮುಂದೆ ಅದರ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳದೆ ನನ್ನ ವಾಕಿಂಗ್ ಮುಂದುವರೆಸಿದೆ. ಕೆಲ ನಿಮಿಷಗಳ ನಂತರ ನೋಡಿದಾಗ ಈಗಾಗಲೇ ಎರಡು ಚೀಲಗಳು ತರಕಾರಿ ಮಾರುಕಟ್ಟೆಯನ್ನು ಸೇರಿದ್ದವು.ಮೂರನೇ ಚೀಲವನ್ನು ರಸ್ತೆಯ ಆಚೆ ಬದಿಯಲ್ಲಿರುವ ಸಸಿಗಳನ್ನು ಮಾರುವ ನರ್ಸರಿಯ ವ್ಯಕ್ತಿ ತನ್ನ ಹೆಗಲ ಮೇಲೆ ಹೊತ್ತುಕೊಂಡು ಮಾರುಕಟ್ಟೆಯಲ್ಲಿ ಇಟ್ಟು ಬಂದನು. ಇದನ್ನು ಕಂಡ ನನಗೆ ಸೋಜಿಗದ ಜೊತೆ ಜೊತೆಗೆ ಅಪಾರ ಸಂತೋಷವಾಯಿತು.

ಕಳೆದ ಒಂದು ವರ್ಷದಿಂದ ರಸ್ತೆಯ ಆಚೆ ಬದಿಯಲ್ಲಿರುವ ಕಾಲೇಜಿನ ಆವರಣದ ಹೊರ ಭಾಗಕ್ಕೆ ಅಂಟಿಕೊಂಡಂತೆ ಪುಟ್ಟ ನರ್ಸರಿ ಯನ್ನು ತೆರೆದಿರುವ ಹೊರರಾಜ್ಯದ ಆ ವ್ಯಕ್ತಿಗೆ ಕನ್ನಡ ಭಾಷೆ ಬರುವುದಿಲ್ಲ. ಆತನೊಂದಿಗೆ ವ್ಯವಹರಿಸುವವರು ಕೂಡ ತಮಗೆ ಗೊತ್ತಿರುವ ಹರುಕು ಮುರುಕು ಹಿಂದಿಯಲ್ಲಿ ಮಾತನಾಡುತ್ತಾರೆ. ತನ್ನ ಇಬ್ಬರು ಜೊತೆಗಾರರೊಂದಿಗೆ ಇಲ್ಲಿಯೇ ಇರುವ ಆತ ತನ್ನ ನರ್ಸರಿಗೆ ಬೇಕಾಗುವ ನೀರನ್ನು ಪಕ್ಕದಲ್ಲಿಯೇ ಇರುವ ಪೆಟ್ರೋಲ್ ಬಂಕ್ ನಿಂದ ಪಡೆಯುತ್ತಾನೆ ಅಲ್ಲಿಯೂ ಕೂಡ ಯಾವುದೇ ಹಣವನ್ನು ಆತನಿಂದ ನಿರೀಕ್ಷಿಸದ ಪೆಟ್ರೋಲ್ ಬಂಕ್ ಮಾಲೀಕರ ಔದಾರ್ಯಕ್ಕೆ ಬದಲಾಗಿ ಆ ಪೆಟ್ರೋಲ್ ಬಂಕಿನ ಪುಟ್ಟ ಉದ್ಯಾನದ ಗಿಡಗಳಿಗೆ ನೀರು ಹಾಕುವುದು, ಸಸಿಗಳನ್ನು ಪಾಲಿಸುವುದನ್ನು ಆತ ಮಾಡುತ್ತಾನೆ. ಮತ್ತೆ ಹಲವಾರು ಬಾರಿ ಪುರಸಭೆಯ ಟ್ಯಾಂಕರ್ನಿಂದ ನೀರನ್ನು ತರಿಸಿಕೊಳ್ಳುತ್ತಾನೆ.

ಭಾಷೆಯೇ ಬಾರದ ಆ ಹಳ್ಳಿಯ ವೃದ್ಧ ವ್ಯಕ್ತಿ ಮತ್ತು ಆತನ ನಡುವೆ ನಡೆದಿರಬಹುದಾದ ಸನ್ನೆಯ ಸಂಭಾಷಣೆಯನ್ನು ಊಹಿಸಿ ವೃದ್ಧನಿಗೆ ನರ್ಸರಿಯ ವ್ಯಕ್ತಿ ಸಹಾಯ ಮಾಡಿದ ಎಂದಾಗ ನನ್ನ ಮನಸ್ಸಿನಲ್ಲಿ ಹಾದು ಹೋದದ್ದು ಮೂಕ ಹಕ್ಕಿಯು ಹಾಡುತಿದೆ ಭಾಷೆಗೆ ನಿಲುಕದ ಭಾವಗೀತೆ ಎಂಬ ಚಲನಚಿತ್ರ ಗೀತೆ.

ಯಾರೂ ಇಲ್ಲದ ನಿರ್ಜನ ರಸ್ತೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಹೆಣ್ಣು ಮಕ್ಕಳು ಮತ್ತು ಮಕ್ಕಳೊಂದಿಗೆ ನಿಂತಿದ್ದರೆ ಸೌಜನ್ಯಕ್ಕಾಗಿಯಾದರೂ ಏನಾದರೂ ಸಹಾಯ ಬೇಕೆ ಎಂದು ಕೇಳುವುದು ಮತ್ತು ಅಗತ್ಯ ಬಿದ್ದರೆ ಸಹಾಯ ಮಾಡುವುದು, ರಸ್ತೆಯಲ್ಲಿ ನಡೆಯುತ್ತಿರುವಾಗ ಆಕಸ್ಮಿಕ ಅಪಘಾತ ಸಂಭವಿಸಿ ಎಚ್ಚರ ತಪ್ಪಿ ಬಿದ್ದ ವ್ಯಕ್ತಿಯನ್ನು ಉಪಚರಿಸುವುದು, ಸಂತೆಯಲ್ಲಿ ಕಳೆದು ಹೋದ ಮಗುವನ್ನು ಸುರಕ್ಷಿತವಾಗಿ ಪಾಲಕರಿಗೆ ತಲುಪುವಂತೆ ಮಾಡಲು ಆ ಮಗುವನ್ನು ಪೊಲೀಸರ ಸುಪರ್ದಿಗೆ ಒಪ್ಪಿಸುವುದು ಇಂತಹ ಹತ್ತು ಹಲವಾರು ಕೆಲಸಗಳು ಮಾನವೀಯ ಹಿನ್ನೆಲೆಯಲ್ಲಿ ಅದ್ಭುತ ಕಾರ್ಯಗಳೆನಿಸುತ್ತವೆ. ಎಷ್ಟೋ ಬಾರಿ ಈ ರೀತಿ ತ್ವರಿತ ಕಾರ್ಯನಿರ್ವಹಣೆಯು ವ್ಯಕ್ತಿಯ ಜೀವವನ್ನು ಉಳಿಸುತ್ತದೆ.

ಅದೆಷ್ಟು ಚಂದ ಅಲ್ಲವೇ ಸ್ನೇಹಿತರೆ, ಮಾತೆ ಬಾರದೆ ಕೇವಲ ಮೌನ ಸಂಭಾಷಣೆ ಇಲ್ಲವೇ ಸನ್ನೆಗಳ ಮೂಲಕ ಪರಸ್ಪರ ನೆರವಾಗುವುದು ಭಾವಗಳನ್ನು ಅರಿಯುವುದು ಮನುಷ್ಯ ಮನುಷ್ಯರ ನಡುವಿನ ಬಾಂಧವ್ಯಕ್ಕೆ ಉತ್ತಮ ವೇದಿಕೆಯಾಗಬಲ್ಲದು. ಇಂತಹ ಸಮಯಗಳಲ್ಲಿ ಯಾರು ಯಾರದೇ ಜಾತಿ ಮತ ಪಂಥವನ್ನು ಕೇಳದೆ ಸಹಾಯ ಮಾಡುವುದೇ ವಿಶ್ವಮಾನವ ಧರ್ಮ. ಅದು ನಮ್ಮ ನಿಮ್ಮೆಲ್ಲರಲ್ಲಿಯೂ ಅಂತರ್ಗತವಾಗಿದೆ. ಇಲ್ಲದ ತೊಂದರೆಗಳಿಗೆ ಈಡು ಮಾಡುತ್ತದೆ ಎಂಬ ಭಯದಿಂದ ಕೆಲವೊಮ್ಮೆ ಹಿಂಜರಿದರೂ ಪ್ರಸ್ತುತ ಜಗತ್ತಿನಲ್ಲಿ ಈ ಮಾನವೀಯ ನೆಲೆಯ ಅಗತ್ಯತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಅಂತಹ ಮಾನವಿಯ ಪ್ರಜ್ಞೆಯನ್ನು ನಾವೆಲ್ಲರೂ ಹೊಂದುವ. ಆ ಮೂಲಕ ಆಧ್ಯಾತ್ಮ ಭಾರತದ ಔನ್ನತ್ಯಕ್ಕೆ ಕಾರಣರಾಗೋಣ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

# ಕುಷ್ಟರೋಗದ ಬಗ್ಗೆ ನಿರ್ಲಕ್ಷ್ಯ ಬೇಡ

**ಜಿಲ್ಲಾರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ ಹೇಳಿಕೆ | ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ**

■ ಹಂಪಿ ಟೈಮ್ಸ್ ಕೊಪ್ಪಳ



ಚರ್ಮದಲ್ಲಾಗುವ ಬದಲಾವಣೆಗಳು ಕುಷ್ಠರೋಗದ ಲಕ್ಷಣಗಳಾಗಿರಬಹುದು. ಅಂತಹ ಯಾವುದೇ ಚರ್ಮದ ಬದಲಾವಣೆಯನ್ನು ನಿರ್ಲಕ್ಷ್ಯ ಮಾಡದೆ ಸಮೀಪದ ಆಸ್ಪತ್ರೆಯಲ್ಲಿ ಪರೀಕ್ಷಿಸಿಕೊಳ್ಳಿ ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ, ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ ಯಲಬುರ್ಗಾ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಬಳೂಟಗಿ ಇವರ ಸಂಯುಕ್ತಾಶ್ರಯದಲ್ಲಿ ಬುಧವಾರದಂದು ಬಳೂಟಗಿ ವ್ಯಾಪ್ತಿಯ ಚಿಕ್ಕೊಪ್ಪ ತಾಂಡ ಗ್ರಾಮದ ಶ್ರೀ ಸೇವಾಲಾಲ ದೇವಸ್ಥಾನದ ಹತ್ತಿರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಯಾರಿಗಾದರೂ ಮೈ ಮೇಲೆ ತಿಳಿ–ಬಿಳಿ ತಾಮ್ರವರ್ಣದ ಸ್ಪರ್ಶಜ್ಞಾನವಿಲ್ಲದ 5 ಅಥವಾ 5ಕ್ಕಿಂತ ಹೆಚ್ಚು ಮಚ್ಚೆಗಳು ಇದ್ದರೆ, ಪಾದಗಳ ದೌರ್ಬಲ್ಯ, ಬೆರಳುಗಳ ದೌರ್ಬಲ್ಯ, ತ್ವಚೆಯ ಮೇಲೆ ಕೆಂಪಾದ ಬಾವು, ಕಣ್ಣು ಮುಚ್ಚುವಲ್ಲಿ ತೊಂದರೆ ಕಾಣಿಸಿಕೊಂಡರೆ, ಇವು ಕುಷ್ಠರೋಗದ ಲಕ್ಷಣಗಳಾಗಿರಬಹುದು. ಆದ್ದರಿಂದ ಇಂತಹ ಲಕ್ಷಣಗಳು ಯಾರಿಗಾದರು ಕಾಣಿಸಿಕೊಂಡರೆ, ತಕ್ಷಣ ತಮ್ಮ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರೀಕ್ಷಿಸಿಕೊಂಡು, ಖಚಿತ ಪಟ್ಟರೆ ಉಚಿತವಾಗಿ ಚಿಕಿತ್ಸೆ ಪಡೆಯಿರಿ. ಇದಕ್ಕೆ ಯಾರೂ ಹಿಂಜರಿಯಬಾರದು. ಇದು ಮೈಕ್ರೊಬ್ಯಾಕ್ಟಿರಿಯಾ ಲೆಪ್ರೈ ಎಂಬ ಸೂಕ್ಷ್ಮಾಣುವಿನಿಂದ ಗಾಳಿ ಮೂಲಕ ಹರಡುತ್ತದೆ. ಇದೊಂದು ಸಾಂಕ್ರಾಮಿಕ ರೋಗವಾಗಿದೆ. ರೋಗಿಯು ಕೆಮ್ಮುವುದರ ಮೂಲಕ ಮತ್ತು ಸೀನುವುದರ ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ಇದು ಖಂಡಿತ ಗುಣಮುಖವಾಗುವಂತ ಖಾಯಿಲೆಯಾಗಿದೆ. ಎಂ.ಡಿ.ಟಿ ಚಿಕಿತ್ಸೆಯಿಂದ ಗುಣ ಪಡಿಸಬಹುದು. ತಿಳಿ–ಬಿಳಿ ತಾಮ್ರವರ್ಣದ ಸ್ಪರ್ಶಜ್ಞಾನವಿಲ್ಲದ ಮಚ್ಚೆಗಳಿದ್ದರೆ ನಿರ್ಲಕ್ಷ್ಯ ಮಾಡದೆ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಪರೀಕ್ಷಿಸಿಕೊಳ್ಳಿ ಎಂದು ಅವರು ತಿಳಿಸಿದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ಚನ್ನಬಸಯ್ಯ ಸರಗಣಚಾರಿ ಅವರು ಮಾತನಾಡಿ, ಕುಷ್ಠರೋಗ ಯಾವುದೇ ದೇವರ ಶಾಪ ಹಾಗೂ ಪಾಪ ಮಾಡವುದರಿಂದ ಬರುವುದಿಲ್ಲ. ಇದು ಮೈಕ್ರೊಬ್ಯಾಕ್ಟಿರಿಯಾ ಲೆಪ್ರೈ ಎಂಬ ಸೂಕ್ಷ್ಮಾಣುವಿನಿಂದ ಹರಡುತ್ತದೆ. ಇದಕ್ಕೆ ಸಂಪೂರ್ಣವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಇದಕ್ಕೆ ಯಾರೂ ಭಯಪಡುವ ಅಗತ್ಯವಿಲ್ಲ. ಚರ್ಮದ ಯಾವುದೇ ಖಾಯಿಲೆ ಇದ್ದರೂ ತಮ್ಮ ಮನೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿದಾಗ ಪರೀಕ್ಷಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ, ಆರ್.ಸಿ.ಹೆಚ್. ಕಾರ್ಯಕ್ರಮ, ಕುಟುಂಬ ಕಲ್ಯಾಣ ಕಾರ್ಯಕ್ರಮ, ಸೋಂಕಿತ ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ, ಸಾಂಕ್ರಾಮಿಕ/ಅಸಾಂಕ್ರಾಮಿಕ ರೋಗಗಳ ಕುರಿತು ಮಾಹಿತಿ ನೀಡಲಾಯಿತು. ಗ್ರಾಮದಲ್ಲಿ 07 ತಂಡಗಳನ್ನು ರಚನೆ ಮಾಡಿ, ಮನೆ ಮನೆಗೆ ಭೇಟಿ ನೀಡಿ, ಕರಪತ್ರ ಹಂಚುವುದರ ಮೂಲಕ ಆರೋಗ್ಯ ತಪಾಸಣೆ ಮಾಡಿ, ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಮೇಲ್ವಿಚಾರಕರಾದ ವೀರಭದ್ರಪ್ಪ, ಬಸವರಾಜ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಂಗಯ್ಯ ಕೆ, ಪರಶುರಾಮ, ರಾಜಶೇಖರ, ಸಿ.ಹೆಚ್.ಒ ಗಳಾದ ಪವನಕುಮಾರ, ಆನಂದಕುಮಾರ, ಆಶಾ ಕಾರ್ಯಕರ್ತೆಯರು, ಮುಂಖಡರು, ಸಾರ್ವಜನಿಕರು ಭಾಗವಹಿಸಿದ್ದರು.

# ಬರ ಪರಿಹಾರದ ಮಾಹಿತಿಗೆ ಸಹಾಯವಾಣಿ ಆರಂಭ

■ ಹಂಪಿ ಟೈಮ್ಸ್ ಕೊಪ್ಪಳ

ಸರ್ಕಾರ 2023–24 ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ 7 ತಾಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ, ರೈತರಿಗೆ ನೇರವಾಗಿ ಬರ ಪರಿಹಾರವನ್ನು ಡಿ.ಬಿ.ಟಿ ಮೂಲಕ ಜಮಾ ಮಾಡಿರುತ್ತಾರೆ. ಬರಪರಿಹಾರ ಬಾರದೇ ಇರುವ ರೈತರಿಗೆ ಅನುಕೂಲವಾಗುವಂತೆ ತಾಲೂಕುವಾರು ಸಹಾಯವಾಣಿಯನ್ನು ತೆರೆಯಲಾಗಿರುತ್ತದೆ. ರೈತರು ತಮ್ಮ ತಾಲೂಕಿಗೆ ಒಳಪಡುವ ತಹಶೀಲ್ದಾರ ಕಛೇರಿಯ ಸಹಾಯವಾಣಿಗೆ ಕರೆ ಮಾಡಿ ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.

ಸಹಾಯವಾಣಿ ಸಂಖ್ಯೆಗಳ ವಿವರ: ಜಿಲ್ಲಾಧಿಕಾರಿಗಳ ಕಛೇರಿ ಕೊಪ್ಪಳ: 7676732001, ತಾಲೂಕು ಕಛೇರಿ, ಕೊಪ್ಪಳ: 9380252346, ತಾಲೂಕು ಕಛೇರಿ ಯಲಬುರ್ಗಾ: 9448833207, ತಾಲೂಕು ಕಛೇರಿ ಕುಷ್ಟಗಿ: 08536–267031, ತಾಲೂಕು ಕಛೇರಿ ಕನಕಗಿರಿ: 080–23900982, 7019926721, 7251961075, ತಾಲೂಕು ಕಛೇರಿ ಕುಕನೂರು: 8050303495, ತಾಲೂಕು ಕಛೇರಿ ಗಂಗಾವತಿ: 9740793877, ತಾಲೂಕು ಕಛೇರಿ ಕಾರಟಗಿ: 8105519120 ಹಾಗೂ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಕೊಪ್ಪಳ: 7760956433, ಯಲಬುರ್ಗಾ: 8277932125, ಕುಷ್ಟಗಿ: 8277932126, ಗಂಗಾವತಿ: 8277929649 ಗೆ ಸಂಪರ್ಕಿಸಿ ರೈತರು ಮಾಹಿತಿ ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ತಿಳಿಸಿದೆ.

# ಮಹಾನ್ ಸಂತ ಚನ್ನವೀರಸ್ವಾಮಿ

**ಮೊದಲ ಪುಟದಿಂದ**

ಸಹಕಾರದಿಂದ, 65 ಲಕ್ಷಕ್ಕೂ ಅಧಿಕ ಖರ್ಚಿನೊಂದಿಗೆ ಚನ್ನವೀರಸ್ವಾಮಿಗಳ ದೇವಸ್ಥಾನವು ಯಶಸ್ವಿಯಾಗಿ ನೆರವೇರಿದೆ. ಇಂತಹ ಧಾರ್ಮಿಕ ಕಾರ್ಯದಲ್ಲಿ ಅತೀ ಕಡುಬಡವನಾದ ಲಕ್ಕಪ್ಪನು ಕೇವಲ ಅರ್ಧ ಎಕ್ಕರೇ ಜಮೀನು ಹೊಂದಿದ ವ್ಯಕ್ತಿಯ ದೇವಸ್ಥಾನ ನಿರ್ಮಾಣಕ್ಕಾಗಿ 45 ಸಾವಿರ ರೂಗಳನ್ನು ದೇಣಿಗೆ ನೀಡಿದ್ದಾನೆ ಎಂದು ಸ್ಮರಿಸಿ, ಈ ರೀತಿಯ ನಿಸ್ವಾರ್ಥ ಸೇವೆಗಳು ನೀಡಲು ಪ್ರತಿಯೊಬ್ಬರ ಮುಂದೆ ಬಂದಲ್ಲಿ ನಮ್ಮ ಗ್ರಾಮದ ಅಭಿವೃದ್ಧಿಗಾಗಿ ಯಾರ ಸಹಕಾರವಿಲ್ಲದೇ ಬೆಳೆಯಬಹುದು ಎಂದರು.

ಈ ಸಂದರ್ಭದಲ್ಲಿ ಚನ್ನವೀರ ಶಿವಯೋಗಿ ಸ್ವಾಮಿ ಲಿಂಗನಾಯಕನಹಳ್ಳಿ, ಶಾಂತಲಿಂಗ ದೇಶೀಕೇಂದ್ರ ಸ್ವಾಮಿಗಳು ಅರಸೀಕೆರೆ, ಶಿವಕುಮಾರಸ್ವಾಮಿ ದಳವಾಹಿಮಠ ಹಾವನೂರು, , ಡಿ ಕೊಟ್ರಬಸಪ್ಪ ಚನ್ನವೀರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ, ವಕೀಲ ಪ್ರಕಾಶ್ ಪಾಟೀಲ್, ಶ್ರೀಕಾಂತರೆಡ್ಡಿ, ಹೆಚ್ ರುದ್ರಪ್ಪ, ಗಿರಿರಾಜರೆಡ್ಡಿ, ಶ್ರೀಧರ, ಡಿ ವಿಠೋಬಪ್ಪ, ಬಸವರಾಜಪ್ಪ ಬಣಕಾರ, ಕೂಭ್ಯಾನಾಯ್ಕ ಅಧ್ಯಕ್ಷರು ಕುಂಚೂರು ಗ್ರಾಮ ಪಂಚಾಯ್ತಿ, ಪ್ರಭಾವತಿ ಕೃಷ್ಣ ಪಾಟೀಲ್, ಜಗನ್ನಾಥ ರೆಡ್ಡಿ ಹಾಗೂ ಇತರರಿದ್ದರು.

## ಬೆಳಕಿನ ಹಾದಿ

# ಸ್ವಯಂ ವಿನಾಶದ ಹಾದಿ ಎಂದರೆ ಇದೇ...

■ ದೀಪಶ್ರೀ ಎಸ್ ಕೂಡ್ಲಿಗಿ



ಹಲವಾರು ವರ್ಷಗಳ ಹಿಂದೆ ಒಂದು ಚೇಳು ನದಿಯ ದಂಡೆಯಲ್ಲಿ ವಾಸ ಮಾಡುತ್ತಿತ್ತು. ಇದಕ್ಕಿದ್ದಂತೆ ತೀವ್ರತರ ಪ್ರವಾಹ ಉಂಟಾಗಿ ಚೇಳಿಗೆ ಜೀವಭಯ ಹುಟ್ಟಿತು. ಮುಂದೇನು? ತಾನು ನದಿಯ ಬೇರೆ ದಡಕ್ಕೆ ಹೋಗದೆ ಇದ್ದರೆ ಅದುವೇ ನನ್ನ ಜೀವನದ ಕೊನೆಯ ಅಧ್ಯಾಯವಾಗಬಹುದೆಂದು ಭಾವಿಸಿತು.ಅದೇ ಸಮಯಕ್ಕೆ ನದಿಯಲ್ಲಿ ಜಿಗಿಯುತ್ತಿದ್ದ ಕಪ್ಪೆಯೊಂದನ್ನು ಕಂಡ ಚೇಳು ತಾನು ಬದುಕಲು ಕಪ್ಪೆಯ ಸಹಾಯ ಪಡೆಯಬೇಕೆಂದು ಯೋಚಿಸಿತು. ಸಂತಸದಿಂದ ಜಿಗಿಯುತ್ತಿದ್ದ ಕಪ್ಪೆಯು ಚೇಳನ್ನು ಕಂಡೊಡನೆ ಹೆದರಿ ದೂರ ಸರಿಯಿತು. ಕಪ್ಪೆಗೆ ಧೈರ್ಯ ತುಂಬಿದ ಚೇಳು "ನನ್ನನ್ನು ನದಿಯ ಇನ್ನೊಂದು ದಡಕ್ಕೆ ಸೇರಿಸಿದರೆ ನಾನು ನಿನ್ನನ್ನು ಎಂದಿಗೂ ಕುಟುಕುವುದಿಲ್ಲ" ಎಂದಿತು. ನಾನು ನಿನ್ನನ್ನು ಕುಟುಕಿದರೆ ನಾನು ಕೂಡ ಸಾಯುತ್ತೇನೆ ಅಲ್ಲವಾ ಎಂದು ಪರಿಪರಿಯಾಗಿ ಹೇಳುತ್ತಾ ತನ್ನ ನೈಜ ಗುಣವನ್ನು ಮರೆಮಾಚಿತು.

ಕಪ್ಪೆಗೆ ಸರಿಯೆಂದೆನಿಸಿ ಧೈರ್ಯ ಹಾಗೂ ನಂಬಿಕೆ ಹುಟ್ಟಿತು. ಚೇಳಿನ ಜೀವ ಉಳಿಸಲು ಈಗ ನಾನೇ ಬೇಕು. ಜೀವ ಉಳಿಸುವ ನನ್ನನ್ನು ಚೇಳು ಏನು ತಾನೆ ಮಾಡಿಯಾತು? ವಿಷಕಾರಿ ಚೇಳು ಜೀವ ಉಳಿಸಿಕೊಳ್ಳಲು ನನ್ನ ಸಹಾಯ ಬೇಡುತ್ತಿದೆ ನಾನೇ ಹೆಚ್ಚು ಅಲ್ಲವಾ ಎಂದು ಅಹಂ ಹುಟ್ಟಿತು ಕಪ್ಪೆಗೆ."ಬಾ ಸಹೋದರ ನನ್ನ ಬೆನ್ನ ಮೇಲೆ ಹತ್ತು, ನೀನು ವಾಸಿಸಲು ಯೋಗ್ಯವಾದ ಸ್ಥಳಕ್ಕೆ ಕರೆದೊಯ್ಯುತ್ತೇನೆ" ಎಂದಿತು. ಚೇಳು ಕಪ್ಪೆಯ ಬೆನ್ನ ಮೇಲೆ ಹತ್ತಿ ಕುಳಿತಿತು. ಬಹು ಜಂಬದಿ ಕಪ್ಪೆಯು ಚೇಳನ್ನು ನದಿಯ ಮತ್ತೊಂದು ಬದಿಗೆ ಸಾಗಿಸಿತು. ದಂಡೆ ಸಮೀಪಿಸಿದ ನಂತರ ಚೇಳು ಕಪ್ಪೆಯ ಬೆನ್ನನ್ನು ಕುಟುಕಿ ಇಳಿಯಿತು." ಏಕೆ ಹೀಗೆ ಮಾಡಿದೆ?" ಕಪ್ಪೆ ಪ್ರಶ್ನಿಸಲಾಗಿ," ಕುಟುಕುವುದು ನನ್ನ ಜನ್ಮಸಿದ್ಧ ಹಕ್ಕು, ಜನ್ಮತಃ ಸ್ವಭಾವ" ಎಂದಿತು. ವಿಷವೇರಿದ ಕಪ್ಪೆ ಅಲ್ಲಿಯೇ ಮರಣಿಸಿತು.



ಇದು ಕೇವಲ ನೀತಿ ಕಥೆಯಷ್ಟೇ. ಇದರ ಹಿಂದಿರುವ ತಾತ್ಪರ್ಯ ಅಪಾರ. ನಂಬಿ ಕೆಟ್ಟವರಿಲ್ಲ ಎಂಬ ಮಾತಿದೆ. ಆದರೆ ಅತಿಯಾದ ನಂಬಿಕೆ ಒಳ್ಳೆಯದಲ್ಲ. ಅದರಲ್ಲೂ ಧೂರ್ತರನ್ನು ನಂಬುವುದು ಅಪಾಯಕಾರಿ.ಮಾತಲ್ಲಿ ಬೆಣ್ಣೆ ಕಂಕುಳಲ್ಲಿ ದೊಣ್ಣೆ ಹಿಡಿದವರನ್ನು ನಂಬುವುದು ಸಾವಿನ ದಾರಿ ಹಿಡಿದಂತೆ. ಜನರ ಸ್ವಭಾವವನ್ನು ಆಧರಿಸಿ ನಂಬಿಕೆಯಿಡಬೇಕು. ಬೇವಿನ ಗಿಡಕ್ಕೆ ಬೆಲ್ಲದ ನೀರೆರೆದರೆ ,ಬೇವು ಸಿಹಿಯಾಗುವುದಿಲ್ಲ .ಹಾವಿಗೆ ಹಾಲೆರೆದರೆ ಕಚ್ಚುವ ಗುಣವನ್ನು ಬಿಡುವುದಿಲ್ಲ. ಹಾಗೇ ಮೋಸಗಾರರನ್ನೂ ಅತಿಯಾಗಿ ನಂಬಿ ನಮ್ಮ ಜೀವವನ್ನೇ ಅವರಿಗೆ ಅರ್ಪಿಸುವುದು ಸಾವಿನ ಕೈಗೆ ಬುದ್ಧಿ ಕೊಟ್ಟಂತೆ ಲೆಕ್ಕ. ಸ್ವಯಂ ವಿನಾಶ ಹಾದಿ ಹಿಡಿಯುವುದು ಎಂದರೆ ಇದೆ .ಯಾವುದೇ ಅತಿಯಾದರೋ ಅದು ಕೆಟ್ಟದ್ದು. ಮೂಲತಃ ದುಷ್ಟವಾದ ಚೇಳಿನ ಮಾತನ್ನು ನಂಬಿದ ಕಪ್ಪೆಯು ಸಾವಿನ ಅಂಚು ಹಿಡಿಯಿತು. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಎದುರಲ್ಲಿ ಹೊಗಳಿ ಬೆನ್ನಲ್ಲಿ ಇರಿಯುವಂತ ಜನರಿಂದ ದೂರವಿರಬೇಕು."ಅತಿಯಾದ ರೂಪ ಸೀತೆಗೆ ಮುಳುವಾಯಿತು, ಅತಿಯಾದ ಗರ್ವ ರಾವಣನಿಗೆ ಕೇಡುಂಟು ಮಾಡಿತು, ಅತಿಯಾದ ದಾನ ಬಲಿಯನ್ನು ನಾಶ ಮಾಡಿತು. ಆದ್ದರಿಂದ ಅತಿಯಾಗಿ ಯಾವುದನ್ನು ಮಾಡಬಾರದು". ಎಂಬ ಚಾಣುಕ್ಯನ ಮಾತು ಅಕ್ಷರಶಃ ಸತ್ಯ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಕಂಪ್ಯೂಟರ್, ಮೊಬೈಲ್ ಮತ್ತು ಮಕ್ಕಳು

ನಿನ್ನೆಗಿಂತ ಇಂದು ಇಂದಿಗಿಂತ ನಾಳೆಗೆ ತೀವ್ರವಾಗಿ ಬೆಳೆಯುತ್ತಿರುವ ಎಲ್ಲ ರೀತಿಯ ಆಧುನಿಕ ಜೀವನ ಶೈಲಿಗಳು ಮಕ್ಕಳ ಮನಸ್ಸನ್ನು ಹೆಚ್ಚಾಗಿ ಚಂಚಲಗೊಳಿಸುತ್ತಿವೆ. ನಿನ್ನೆ ದೊರೆತ ವಸ್ತು ವಿಷಯ ಇಂದಿಗೆ ಹಳೆಯದು ಇಂದು ಅನುಭವಿಸಿದ ವಸ್ತು ವಿಷಯ ನಾಳೆಗೆ ಹಳಸು ಎಂಬ ದೃಷ್ಟಿಕೋನ ಬೆಳೆಯುತ್ತಿದೆ. ಇಂದು ನಗರಪ್ರದೇಶಗಳು ಯಾಂತ್ರಿಕವಾಗಿ ಬೆಳೆಯುತ್ತಿವೆ. ಈ ನಗರ ಸಂಸ್ಕೃತಿಯಲ್ಲಿ ಜಾಗತಿಕ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ವಿಪರೀತವಾಗಿದೆ. ಅದರ ರೀತಿ-ನೀತಿಗಳ ಒತ್ತಡದಿಂದ ವಿಭಕ್ತ ಕುಟುಂಬಗಳು ಅನಿವಾರ್ಯವಾಗಿವೆ.

ಈಗಲೂ ಬೆರಳಿಣಿಕೆಯಷ್ಟು ಅವಿಭಕ್ತ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದಾಗಿದೆ. ಮಕ್ಕಳಲ್ಲಿ ಬಂಧುಬಾಂಧವರ ಆತ್ಮೀಯತೆ, ಪ್ರೀತಿ, ವಿಶ್ವಾಸದ ಭ್ರಾತೃತ್ವದ ಭಾವನೆಗಳು ಸೊರಗುತ್ತಿವೆ. ಅಲ್ಲದೆ ಅವುಗಳ ಪ್ರಾಮುಖ್ಯತೆ ಇಂದಿನ ಯುವ ಜನಾಂಗಗಳಿಗೆ ಗೊತ್ತಾಗುತ್ತಿಲ್ಲ. ಅದರ ಮಹತ್ವ ಹಿನ್ನೆಲೆಯನ್ನೂ ಪೋಷಕರು ತಿಳಿಸಿಕೊಡಬೇಕಾಗಿದೆ.

ಈಚೆಗೆ ಸುಮಾರು ಹತ್ತು ವರ್ಷಗಳಿಂದ ಮಕ್ಕಳ ಓದು ವಿದ್ಯೆಯೆಲ್ಲಾ ಕೇವಲ ಅಂಕಗಳ ಆಧಾರದ ಮೇಲೆ ನಿಂತಿದೆ, ವಿನಃ ನಮ್ಮ ಪರಂಪರೆಯ ಸಂಸ್ಕೃತಿಯ ಜ್ಞಾನದ ಮಹತ್ವ ತಿಳಿಸಿಕೊಡುವ ಪ್ರಯತ್ನ ಆಗುತ್ತಿಲ್ಲ. ಮಗುವಿಗೆ ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ದೊರೆತಾಗ ಜ್ಞಾನದ ಬೆಳವಣಿಗೆ ಉತ್ತಮವಾಗುತ್ತದೆಂದು ವೈಜ್ಞಾನಿಕವಾಗಿ ಶೋಧಿಸಲಾಗಿದೆ. ಆದರೆ ಆಂಗ್ಲಭಾಷೆಯ ವ್ಯಾಮೋಹದಿಂದ ನಮ್ಮ ಭಾರತೀಯ ಸಂಸ್ಕೃತಿ-ಸಂಸ್ಕಾರಗಳು ಮಾಯವಾಗುತ್ತಾ ಮಕ್ಕಳಲ್ಲಿ ಸಾಮಾಜಿಕ ಕಳಕಳಿ ಕಡಿಮೆಯಾಗುತ್ತಿದೆ. ಇಂದು ಮಕ್ಕಳೊಂದಿಗೆ ಮನೆಯಲ್ಲಿ ಬೆರೆಯಲು ಅಪ್ಪ, ಅಮ್ಮ, ಅಣ್ಣ, ಅಕ್ಕ, ತಂಗಿ ಯಾರಿಗೂ ಸಮಯವಿಲ್ಲ. ಅವರವರ ಕೆಲಸಕಾರ್ಯಗಳಲ್ಲಿ ಮಗ್ನರಾಗಿರುವುದರಿಂದ ಅನಿವಾರ್ಯವಾಗಿ ಮಕ್ಕಳು ನೂರಾರು ಚಾನೆಲ್‌ಗಳಿಗೆ ಜೋತು ಬಿದ್ದಿದ್ದಾರೆ. ಮೊಬೈಲ್, ವಿಡಿಯೋಗೇಮ್, ಕಂಪ್ಯೂಟರ್, ಇಂಟರ್ನೆಟ್, ವಾಟ್ಸ್ಯಪ್, ಫೇಸ್‌ಬುಕ್ಕಗಳಲ್ಲಿ ಮುಳುಗಿದ್ದಾರೆ.



ಕಂಪ್ಯೂಟರ್ ಮೊಬೈಲ್‌ಗಳಲ್ಲಿ ಆಡುವ ಆಟಗಳನ್ನು ಮಕ್ಕಳು ಹತ್ತಿದಲ್ಲಿ ನೋಡುವುದರಿಂದ ಅವರ ಕಣ್ಣಿನ ತೊಂದರೆಗಳು ಚಿಕ್ಕವರಿದ್ದಾಗಿನಿಂದಲೇ ಆರಂಭ ವಾಗುತ್ತಿವೆ ಹಾಗೆಯೇ ಅನೇಕ ವಾಹಿನಿಗಳಲ್ಲಿ ಪ್ರದರ್ಶನಗೊಳ್ಳುವ ಹಿಂಸೆ, ನೋವು, ಅವಮಾನ, ವಿಕೃತ ಭಾವನೆಗಳ ವೈಭವೀಕರಣವು ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಉದಾಹರಣೆಗೆ: ಒಂದು ಮಗು ದಿನಕ್ಕೆ ಸುಮಾರು 2 ತಾಸು ಟಿ.ವಿ. ವೀಕ್ಷಿಸಿದರೆ ಅದು ಹೈಸ್ಕೂಲ್ ಬರುವ ವೇಳೆಗೆ ಏಳು ಸಾವಿರ ಕೊಲೆ ಒಂಭತ್ತು ಸಾವಿರಕ್ಕೂ ಹಿಂಸಾತ್ಮಕ ಘಟನೆಗಳನ್ನು ನೋಡಿರುತ್ತ ದೆಂದು ಅಮೇರಿಕಾದಲ್ಲಿ ನಡೆದ ಒಂದು ಸಂಶೋಧನೆಯಿಂದ ತಿಳಿದುಬಂದಿದೆ. ಅದೇರೀತಿ ವಿಡಿಯೋ ಗೇಮ್‌ಗಳಲ್ಲಿನ ಆಟಗಳೂ ಸಹ ಹಿಂಸೆಯಾಕಾರದಲ್ಲಿದ್ದು ಬಾಕ್ಸಿಂಗ್, ಕಾರ್ ಬೈಕ್ ರೇಸಿಂಗ್, ಪಿಸ್ತೂಲಿನಿಂದ ಸುಡುವದು, ಅಪಘಾತ ಮಾಡುವುದು ಮುಂತಾದವುಗಳಲ್ಲಿ ತಲ್ಲೀನರಾಗಿರುತ್ತಾರೆ. ಮಕ್ಕಳು ಬಾಲ್ಯದಲ್ಲಿ ಇಂತಹ ಕ್ರೌರ್ಯತನದ ಕಾರ್ಯಕ್ರಮಗಳನ್ನು ನೋಡುತ್ತಾ ಬಂದರೆ ಸಮಾಜದಲ್ಲಿ ಅವರ ಭಾವನೆಗಳು ಕೆರಳುತ್ತವೆ. ಆದ್ದರಿಂದ ಮನೆಯಲ್ಲಿ ಪೋಷಕರು ಮಕ್ಕಳ ಮೇಲೆ ಸದಾ ಗಮನವಿಟ್ಟಿರಬೇಕು. ಅವರನ್ನು ಹತ್ತಿರದಲ್ಲಿ ಕೂಡಿಸಿಕೊಂಡು ಸಾಹಿತ್ತಿಕ ಧಾರ್ಮಿಕ ಆಚಾರ-ವಿಚಾರಗಳ ಬಗೆಗೆ ಬೋಧನೆ ಮಾಡಬೇಕು. ಮಕ್ಕಳಿಗೆ ಮನಸ್ಸನ್ನು ತಟ್ಟುವ ಕಥೆ ಕಾವ್ಯಗಳನ್ನು ಹೇಳಿಕೊಡಬೇಕು. ಅವರ ನಡೆ ನುಡಿಗಳನ್ನು ತಿದ್ದುತ್ತಾ ಸುಸಂಸ್ಕೃತರನ್ನಾಗಿಸುವ ನಿಟ್ಟಿನಲ್ಲಿ ಉತ್ತಮ ಸಂಸ್ಕಾರವನ್ನು ನೀಡಬೇಕು.

ಇಂದು ಬಹಳಷ್ಟು ಮಕ್ಕಳು ಶಾಲೆ, ಹೋಂವರ್ಕ, ಇಂಟರ್‌ನೆಟ್‌ನಲ್ಲಿಯೇ ಮುಳುಗಿರುವುದರಿಂದ ಹೊರಗೆ ಸ್ವಚ್ಛಂದವಾಗಿ ಒಬ್ಬರಿಗೊಬ್ಬರು ಬೆರೆಯುವುದು, ಆಟವಾಡುವುದು ಇಲ್ಲವೇ ಇಲ್ಲ. ಇದರಿಂದ ಅವರ ದೈಹಿಕ ಬೆಳವಣಿಗೆ ಕುಂಠಿತವಾಗಿ ನಿಶ್ಯಕ್ತಿ ಆವರಿಸಿದೆ. ಇಂದು ಆಟಗಳೆಂದರೆ ಕ್ರಿಕೆಟ್, ಹಾಕಿ, ಸ್ನೂಕರ್ ಇತ್ಯಾದಿಗಳನ್ನಷ್ಟೇ ವೈಭವೀಕರಿಸಲಾಗಿದೆ. ನಮ್ಮ ಜನಪದ ಆಟಗಳಾದ ಗೋಲಿ, ಬುಗುರಿ, ಕಬಡಿ, ಚಿಣ್ಣಿದಾಂಡು, ಕೋಕೋ, ಮರಕೋತಿ ಮುಂತಾದವುಗಳ ಬಗೆಗೆ ಇಂದಿನ ಮಕ್ಕಳಿಗೆ ಗೊತ್ತೇ ಇಲ್ಲ. ಇವುಗಳ ಬಗೆಗೆ ತಿಳಿದಂತವರು ಮಾಹಿತಿ ನೀಡಿ ಈ ಆಟಗಳ ಮಹತ್ವ ತಿಳಿಸಿಕೊಡಬೇಕಾಗಿದೆ.

ಭಾರತೀಯ ಸಂಸ್ಕೃತಿಯ ಹಬ್ಬ ಜಾತ್ರೆ ಉತ್ಸವಗಳ ಪರಿಚಯ ನಮ್ಮ ಮಕ್ಕಳಿಗೆ ದಿನದಿನಕ್ಕೂ ಕಡಿಮೆಯಾಗುತ್ತಿದೆ. ಇವುಗಳ ಆಚರಣೆಗಳಿಂದ ಎಲ್ಲ ಬಂಧು-ಬಳಗ, ಸ್ನೇಹಿತರು ಒಂದೆಡೆ ಸೇರಲು ಅನುಕೂಲವಾಗುತ್ತದೆಂಬ ವಿಚಾರವನ್ನು ಮಕ್ಕಳಲ್ಲಿ ಬಿತ್ತಬೇಕು.

ಇಂದು ವಿಭಕ್ತ ಕುಟುಂಬಗಳಲ್ಲಿ ಯಾವುದೇ ಆಚಾರಣೆಗಳನ್ನು ಸಡಗರವಿಲ್ಲದೇ ಯಾಂತ್ರಿಕವಾಗಿ ಮಾಡುತ್ತಿರುವುದು ವಿಪರ್ಯಾಸವೇ ಸರಿ. ಮಕ್ಕಳನ್ನು ಏಕಾಂಗಿಯಾಗಿ ಕೂಡಿಸಿ, ಸತತವಾಗಿ ಓದು ಹೋಂವರ್ಕ ಬರಹದಲ್ಲಿ ತಲ್ಲೀನಗೊಳಿಸಿ, ಯಾರೊಂದಿಗೆ ಸಹಜವಾಗಿ ಬೆರೆಯದಂತಹ ವಾತಾವರಣ ನಿರ್ಮಾಣವಾಗಿದೆ. ಕೇವಲ ಅಂಕಗಳೇ ಜೀವನಕ್ಕೆ ಅಡಿಪಾಯವೆಂಬ ಭ್ರಮೆಯಲ್ಲಿ ಅವರನ್ನು ಮುಳುಗಿಸಿದ್ದೇವೆ.

ಒಟ್ಟಾರೆ ಮಕ್ಕಳ ಮನಸ್ಸನ್ನು ಕಟ್ಟುವ, ಸೌಹಾರ್ದತೆ ಬೆಳೆಸುವ, ವಿನಯದಿಂದ ಬದುಕುವ ಸಂಸ್ಕಾರವನ್ನು ನಾವು ಅವರ ಮನದಲ್ಲಿ ಬಿತ್ತಬೇಕಾಗಿದೆ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Hampi Times E-paper
SCAN AND READ

# ಡೆಂಗ್ಯು ನಿಯಂತ್ರಣಕ್ಕೆ ಸಮುದಾಯದ ಪಾತ್ರ ಅಗತ್ಯ

## ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಹೇಳಿಕೆ । ಡೆಂಗ್ಯು ಮಹಾಮಾರಿಯ ಜಾಗೃತಿ ಸಾರಿದ ಬೈಕ್ ರ‍್ಯಾಲಿ

■ ಹಂಪಿ ಟೈಮ್ಸ್ ಬಳ್ಳಾರಿ




ಡೆಂಗ್ಯು ನಿಯಂತ್ರಣ, ತಡೆಗಟ್ಟುವಿಕೆ ಹಾಗೂ ಅದರ ಮುಂಜಾಗ್ರತಾ ಕ್ರಮಗಳ ಅನುಷ್ಠಾನದಲ್ಲಿ ಸಮುದಾಯದ ಪಾತ್ರ ಪ್ರಮುಖವಾಗಿದೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಚೇರಿ ವತಿಯಿಂದ 'ರಾಷ್ಟ್ರೀಯ ಡೆಂಗಿ ದಿನಾಚರಣೆ' ಅಂಗವಾಗಿ 'ಸಮುದಾಯದೊಂದಿಗೆ ಸೇರಿ ಡೆಂಗಿ ಜ್ವರವನ್ನು ನಿಯಂತ್ರಿಸೋಣ' ಎಂಬ ಘೋಷವಾಕ್ಯದೊಂದಿಗೆ ಸಮುದಾಯದಲ್ಲಿ ಡೆಂಗಿ ಜ್ವರದ ಬಗ್ಗೆ ಅರಿವು ಮೂಡಿಸಲು ಗುರುವಾರದಂದು ನಗರದ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಿಂದ ಹಮ್ಮಿಕೊಂಡಿದ್ದ ಬೈಕ್‌ರ‍್ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮಳೆಗಾಲ ಹಾಗೂ ನಂತರದ ದಿನಗಳಲ್ಲಿ ಡೆಂಗೀ ನಿಯಂತ್ರಣ ಕ್ರಮಗಳನ್ನು ಸಮುದಾಯದ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾರ್ವಜನಿಕರೊಂದಿಗೆ ನಿಕಟ ಸಂಪರ್ಕವಿರುವ ಸರ್ಕಾರ-ಸರ್ಕಾರೇತರ ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಘಗಳ ಸಹಭಾಗಿತ್ವ ಅನಿವಾರ್ಯವಾಗಿದ್ದು, ಇದರಿಂದ ಡೆಂಗಿ ರೋಗ ಪ್ರಸರಣವನ್ನು ನಿಯಂತ್ರಣ ಮಾಡಬಹುದು ಎಂದು ಅಭಿಪ್ರಾಯ ಪಟ್ಟರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ ಅವರು ಮಾತನಾಡಿ, ಮುಂಬರುವ ಮುಂಗಾರು ಸಮಯದಲ್ಲಿ ಮನೆಯ ಸುತ್ತಮುತ್ತಲಿನ ಘನತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾಗುವ ಮಳೆನೀರಿನಲ್ಲಿ ಈಡೀಸ್ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟುವಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಯಾವುದೇ ಜ್ವರವಿದ್ದರೂ ನಿರ್ಲಕ್ಷ್ಯ ಮಾಡದೇ, ತಕ್ಷಣ ವೈದ್ಯರ ಬಳಿ ಭೇಟಿ ನೀಡಿ, ಸೂಕ್ತ ಚಿಕಿತ್ಸೆ ಪಡೆಯುವುದರಿಂದ ಡೆಂಗೀ ಜ್ವರದಿಂದ ಉಂಟಾಗುವ ಸಾವು ನೋವುಗಳನ್ನು ತಡೆಗಟ್ಟಬಹುದು ಎಂದು ತಿಳಿಸಿದರು.

**ಡೆಂಗೀ ಜ್ವರದ ರೋಗ ಲಕ್ಷಣಗಳು:**

ಸೋಂಕಿತ ಈಡೀಸ್ ಈಜಿಪ್ಟೈ ಸೊಳ್ಳೆ ಕಡಿತದಿಂದ ಹರಡುವ ಡೆಂಗೀ ಜ್ವರವು ವೈರಾಣುಗಳಿಂದ ಉಂಟಾಗುತ್ತದೆ. ಇದ್ದಕ್ಕಿದ್ದಂತೆ ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು, ವಾಕರಿಕೆ, ವಾಂತಿ ಆಚಿತರಿಕ ರಕ್ತಸ್ರಾವ, ಒಸಡುಗಳಲ್ಲಿ ರಕ್ತಸ್ರಾವ ಕಂಡುಬರುವುದು.

ಡೆಂಗೀ ಜ್ವರ ತಡೆಗಟ್ಟಲು ಲಸಿಕೆ ಲಭ್ಯವಿರುವುದಿಲ್ಲ. ರೋಗ ಲಕ್ಷಣಗಳಿಗೆ ಅನುಗುಣವಾದ ಚಿಕಿತ್ಸೆಯಿಂದ ಗುಣಪಡಿಸಬಹುದು. ಸೂಕ್ತ ಸಮಯಕ್ಕೆ ಚಿಕಿತ್ಸೆ ಪಡೆಯದಿದ್ದಲ್ಲಿ, ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ. ರೋಗ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ರಕ್ತ ಪರೀಕ್ಷೆ ಹಾಗೂ ಚಿಕಿತ್ಸೆ ಲಭ್ಯವಿದೆ.

**ಡೆಂಗೀ ಜ್ವರ ನಿಯಂತ್ರಣಕ್ಕೆ ಅನುಸರಿಸಬೇಕಾದ ಸರಳ ನಿಯಂತ್ರಣ ಕ್ರಮಗಳು:**

ಮನೆಯಲ್ಲಿ ತೊಟ್ಟಿ, ಬ್ಯಾರೆಲ್, ಡ್ರಂಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ, ಉಜ್ಜಿ ತೊಳೆದು ಪುನ: ನೀರು ತುಂಬಿಸಬೇಕು. ತೊಟ್ಟಿ, ಬ್ಯಾರೆಲ್, ಡ್ರಂಗಳಲ್ಲಿ ಮಳೆ ನೀರು ಶೇಖರಣೆಯಾಗದಂತೆ ಎಚ್ಚರಿಕೆ ವಹಿಸಬೇಕು. ಮನೆಯ ಸುತ್ತ ಮುತ್ತ ಬೀಸಾಡಿರುವ ವಸ್ತುಗಳಲ್ಲಿ ಮಳೆ ನೀರು ಶೇಖರಣೆಯಾಗದಂತೆ ಎಚ್ಚರಿಕೆ ವಹಿಸಬೇಕು.

ಎಲ್ಲಾ ಸರ್ಕಾರಿ, ಖಾಸಗಿ ಕಚೇರಿ ಹಾಗೂ ಸಂಸ್ಥೆಗಳ ಒಳಾಂಗಣ, ಹೊರಾಂಗಣಗಳಲ್ಲಿ ಈಡೀಸ್ ಸೊಳ್ಳೆಯ ಉತ್ಪತ್ತಿ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈಡೀಸ್ ಸೊಳ್ಳೆಗಳು ಹಗಲು ಹೊತ್ತಿನಲ್ಲಿ ಕಚ್ಚುವುದರಿಂದ, ಹಗಲು ಹೊತ್ತಿನಲ್ಲಿ ವಿಶ್ರಾಂತಿ ಪಡೆಯುವರು. ವಿಶೇಷವಾಗಿ ಮಕ್ಕಳು, ವೃದ್ಧರು ಹಾಗೂ ಗರ್ಭಿಣಿಯರು ಸೊಳ್ಳೆ ಪರದೆಯನ್ನು ಬಳಸಬೇಕು. ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಸ್ವಯಂಸೇವಕರು ಮನೆ ಭೇಟಿ ಸಂದರ್ಭದಲ್ಲಿ ಡೆಂಗೀ ನಿಯಂತ್ರಣ ಕುರಿತು ನೀಡುವ ಸಲಹೆಗಳನ್ನು ತಪ್ಪದೇ ಪಾಲಿಸಬೇಕು ಎಂದು ತಿಳಿಸಿದರು.

**ಬಳ್ಳಾರಿ ಜಿಲ್ಲೆಯಲ್ಲಿ ವರದಿಯಾದ ಡೆಂಗೀ ಜ್ವರದ ಅಂಕಿ – ಅಂಶ:**

| ವರ್ಷ | ಸಂಶಯಾಸ್ಪದ | ಖಚಿತ | ಮರಣ |
|---|---|---|---|
| 2020 | 3014 | 250 | 0 |
| 2021 | 4605 | 405 | 0 |
| 2022 | 6514 | 196 | 0 |
| 2023 | 4967 | 176 | 0 |
| 2024 | 1782 | 42 | 0 |

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಹಾಗೂ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರಕುಮಾರ್, ಜಿಲ್ಲಾ ವಿಬಿಡಿಸಿ ಸಮಾಲೋಚಕ ಪ್ರತಾಪ್ ಹೆಚ್., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ಸೇರಿದಂತೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶಕುಂತಲಾ ಮ್ಯಾಳಿ, ನಾಗರಾಜ, ರವೀಂದ್ರ ಜಿನಗ, ಮರಿಬಸವನಗೌಡ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಅಂಭುಜ, ನಂದಿನಿ, ಶಕುಂತಲಾ ಸೇರಿದಂತೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳು, ವಿಬಿಡಿಸಿ ಸಿಬ್ಬಂದಿ ವರ್ಗದವರು, ತಾಲೂಕು ಆರೋಗ್ಯಾಧಿಕಾರಿಗಳ ಸಿಬ್ಬಂದಿಗಳು ಹಾಗೂ ಮಲೇರಿಯಾ ಲಿಂಕ್ ವಾಲಂಟೀಯರ್ಸ್ ಮತ್ತು ಇತರೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸಿಬ್ಬಂದಿಗಳು ಭಾಗವಹಿಸಿದ್ದರು.

ಜಾಗೃತಿ ಬೈಕ್‌ರ‍್ಯಾಲಿಯು ನಗರ ಪ್ರದೇಶದ ಎಲ್ಲಾ ಪ್ರಮುಖ ಬೀದಿಗಳಲ್ಲಿ ಹಾಗೂ ಡೆಂಗೀ ಸಮಸ್ಯಾತ್ಮಕ ವಾರ್ಡ್‌ಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಡೆಂಗೀ ರೋಗದ ಕುರಿತು ಮಾಹಿತಿ ನೀಡಲಾಯಿತು.

# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
60,000
HAMPI TIMES E-PAPER READES
94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:01 • ಸಂಚಿಕೆ:316 • ನೋಂದಣಿ ನಂ.:KARKAN27911 • ವಿಜಯನಗರ • 17.05.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:316 • Reg.No:KARKAN27911 • VIJAYANAGARA • 17.05.2024 • Friday • Page:04 • Rs:2



ಮಕ್ಕಳ ಜ್ಞಾನ ವಿಕಾಸಕ್ಕೆ ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201


# ಡೆಂಗ್ಯು ಮಾರಣಾಂತಿಕ - ನಿರ್ಲಕ್ಷ್ಯ ಬೇಡ

## ಜಿಪಂ ಸಿಇಒ ಸದಾಶಿವ ಪ್ರಭು ಬಿ ಹೇಳಿಕೆ | ಮಳೆಗಾಲದಲ್ಲಿ ಸೊಳ್ಳೆಗಳ ಉತ್ಪತ್ತಿ ಹೆಚ್ಚು | ಸ್ವಚ್ಛತೆ ಇರಲಿ






**ಹಂಪಿ ಟೈಮ್ಸ್ ಹೊಸಪೇಟೆ**

ಡೆಂಗ್ಯು ಜ್ವರವನ್ನು ಜನರು ನಿರ್ಲಕ್ಷಿಸದೆ ಸೂಕ್ತವಾದ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು. ಡೆಂಗ್ಯು ಜ್ವರದ ಬಗ್ಗೆ ಎಚ್ಚರಿಕೆ ವಹಿಸದಿದ್ದರೆ ಮಾರಣಾಂತಿಕವಾಗಬಹುದು ಎಂದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯ ಅವರಣದಲ್ಲಿ ರಾಷ್ಟ್ರೀಯ ಡೆಂಗ್ಯು ದಿನಾಚರಣೆಯ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಅಶ್ರಿತರೋಗಗಳ ನಿಯಂತ್ರಣಾಧಿಕಾರಿ ಕಚೇರಿ ಇವರ ವತಿಯಿಂದ 'ಸಮುದಾಯದೊಂದಿಗೆ ಸೇರಿ ಡೆಂಗ್ಯು ನಿಯಂತ್ರಿಸೋಣ' ಎಂಬ ಘೋಷವಾಕ್ಯದೊಂದಿಗೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

- **ಈಡೀಸ್ ಈಜಿಪ್ಟ್ ಸೊಳ್ಳೆ ಕಚ್ಚುವಿಕೆಯಿಂದ ಡೆಂಗ್ಯು ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.**
- **ಸ್ವಚ್ಛ ನೀರಿನಲ್ಲಿ ಸೊಳ್ಳೆಗಳು ಸಂತಾನಭಿವೃದ್ಧಿ ಮಾಡುತ್ತವೆ. ಹಗಲು ಹೊತ್ತಿನಲ್ಲಿ ಮನುಷ್ಯರನ್ನು ಕಚ್ಚುತ್ತವೆ.**
- **ಮೂರಕ್ಕಿಂತ ಹೆಚ್ಚು ದಿನಗಳಿಂದ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗ, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಂಡಲ್ಲಿ ತಕ್ಷಣವೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಬೇಕು.**

ಮುಂಗಾರು ಪೂರ್ವ, ಮುಂಗಾರು ಮತ್ತು ಮುಂಗಾರಿನ ನಂತರದ ಸಮಯದಲ್ಲಿ ಡೆಂಗ್ಯು ಸೊಳ್ಳೆಗಳ ಸಂತತಿಯು ತೀವ್ರ ಪ್ರಮಾಣದಲ್ಲಿ ಇದ್ದು ಆದ್ದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು. ಡೆಂಗ್ಯೂ ಸೊಳ್ಳೆ ಯಾವಾಗ ಕಚ್ಚುತ್ತದೆ, ಡೆಂಗ್ಯೂ ಕಾಯಿಲೆಯ ಲಕ್ಷಣಗಳೇನು, ಹೇಗೆ ಮುಂಜಾಗ್ರತೆ ವಹಿಸಬೇಕು ಎನ್ನುವಂತಹ ನಾನಾ ವಿಷಯಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಮಾಡಲಾಗುವುದು. ಇನ್ನೂ ಹೆಚ್ಚಿನ ಮಟ್ಟದಲ್ಲಿ ಜನರಿಗೆ ಅರಿವು ಮೂಡಿಸುವುದಕ್ಕಾಗಿ ನಗರದ ಸಂಘ ಸಂಸ್ಥೆಗಳ ಸಹಕಾರ ಪಡೆಯಲಾಗುವುದು. ಮತ್ತು ಸೋಷಿಯಲ್ ಮಿಡಿಯಾವನ್ನು ಬಳಸಿಕೊಂಡು ವ್ಯಾಪಕ ಪ್ರಮಾಣದಲ್ಲಿ ಜನರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ ದೊಡ್ಡಮನಿ, ಎಂ.ಧರ್ಮನಗೌಡ, ಟಿಎಚ್‌ಒ ಡಾ.ಭಾಸ್ಕರ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಕಮಲಮ್ಮ, ಬೆಳಗಾವಿಯ ಡಾ.ಸಿದ್ಧಲಿಂಗಯ್ಯ, ತಾಲೂಕು ಮಟ್ಟದ ಆರೋಗ್ಯ ಅಧಿಕಾರಿಗಳು, ವೈದ್ಯರು ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



**ರೋಗಗಳು ಬಂದಮೇಲೆ ಚಿಕಿತ್ಸೆ ಪಡೆಯುವ ಬದಲಿಗೆ ಬರುವ ಮುನ್ನ ಮುಂಜಾಗ್ರತೆ ವಹಿಸುವುದು ಸೂಕ್ತ. ಮನೆಯಲ್ಲಿ ಶೇಖರಿಸಿದ ನೀರನ್ನು ಆಗಾಗ ಬದಲಾಯಿಸುತ್ತಿರ ಬೇಕು. ಗ್ರಾಮೀಣ ಭಾಗದ ಜನರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಜಿಲ್ಲೆಯ ಪಂಚಾಯಿತಿ ಮಟ್ಟದ ಅಧಿಕಾರಿಗಳು ಹೆಚ್ಚಿನ ಕ್ರಮ ವಹಿಸಬೇಕು ಹಾಗೂ ಡೆಂಗ್ಯು ತಡೆಯಲು ಸಾರ್ವಜನಿಕರು ಸಹಕರಿಸಬೇಕು**

**– ಡಾ.ಶಂಕರ ನಾಯ್ಕ** ಡಿಎಚ್‌ಒ, ವಿಜಯನಗರ

---

**ಮೈಕ್ರೋ ನ್ಯೂಸ್**

## ಹೊಸಪೇಟೆ ಗ್ರಾಹಕರ ಸಂವಾದ ಸಭೆ ಮೇ 18ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಗ್ರಾಮೀಣ ಉಪ ವಿಭಾಗದಲ್ಲಿ ಮೇ 18ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಗ್ರಾಹಕರ ಸಭೆ ಏರ್ಪಡಿಸಲಾಗಿದೆ. ಆದ್ದರಿಂದ ಹೊಸಪೇಟೆ ತಾಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತುಪಡಿಸಿ) ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಜೆಸ್ಕಾಂ ಹೊಸಪೇಟೆ ಕಾರ್ಯ ಮತ್ತು ಪಾಲಕ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಸಪೇಟೆ ರೈಲು ನಿಲ್ದಾಣದಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ರೈಲು ನಿಲ್ದಾಣದ ಗೂಡ್ಸ್ ಶೆಡ್ ಏರಿಯಾದ ಹತ್ತಿರ ರೋಡ್ ನಂಬರ್ 14ರ ರೈಲು ಹಳಿಯ ಪಕ್ಕದಲ್ಲಿ ಸುಮಾರು 17 ರಿಂದ 25 ವಯಸ್ಸಿನ ಅಪರಿಚಿತ ಮಹಿಳೆಯ ಮೃತದೇಹವು ಕೊಳೆತ ಸ್ಥಿತಿಯಲ್ಲಿ ಪತ್ತೆಯಾದ ಬಗ್ಗೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ದೇಹವು ಸಂಪೂರ್ಣವಾಗಿ ಕೊಳೆತ ಸ್ಥಿತಿಯಲ್ಲಿದ್ದು, ಮುಖದ ಚಹರೆ ಪಟ್ಟಿಯನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಯಾರೋ ಅಪರಿಚಿತರು ಮೃತಳ ಕುತ್ತಿಗೆಗೆ ಟವೆಲ್‌ನ್ನು ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದಂತೆ ಕಂಡು ಬಂದಿರುತ್ತದೆ ಎಂದು ದೂರು ನೀಡಿದ ಬಗ್ಗೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಈ ಮೃತ ಮಹಿಳೆ ಬಗ್ಗೆ ಗುರುತು ಹಾಗೂ ವಾರಸುದಾರರು ಪತ್ತೆಯಾದಲ್ಲಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂ:08392-276063, 9480804771 ಅಥವಾ 9480802131 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080-22871219, ಬೆಂಗಳೂರು ಇವರಿಗೆ ಮಾಹಿತಿ ನೀಡಲು ರೈಲ್ವೆ ಸರ್ಕಲ್ ಪೊಲೀಸ್ ಇನ್ಸಪೆಕ್ಟರ್ ತಿಳಿಸಿದ್ದಾರೆ.

---

# ಹಗಲೊತ್ತಿನಲ್ಲೇ ಸರಣಿ ಕಳ್ಳತನ ಭೀತಿಯಲ್ಲಿ ದಿನದೂಡುತ್ತಿರುವ ಜನರು

## ಕಳ್ಳರನ್ನು ಹಿಡಿದು ಜನರಿಗೆ ಭದ್ರತೆ ಒದಗಿಸಲು ಪೊಲೀಸರಿಗೆ ಮನವಿ



**ಹಂಪಿ ಟೈಮ್ಸ್ ಕೂಡ್ಲಿಗಿ**

ರಾತ್ರಿವೇಳೆ ನಡೆಯುತ್ತಿದ್ದ ಕಳ್ಳತನ ಇದೀಗ ಯಾರ ಭಯವೂ ಇಲ್ಲದಂತೆ ಹಗಲೊತ್ತಿನಲ್ಲೆ ನಡೆದಿರುವ ಸರಣಿ ಕಳ್ಳತನಗಳು ಜನರನ್ನು ಬೆಚ್ಚಿಬೀಳಿಸಿವೆ.

ಪಟ್ಟಣದ 1 ಮತ್ತು 2 ನೇ ವಾರ್ಡಿನಲ್ಲಿ ಸರಣಿ ಕಳ್ಳತನ ನಡೆಯುತ್ತಿದ್ದು, ನಾಗರೀಕರು ಭಯಬೀತರಾಗಿದ್ದಾರೆ. ಆಸ್ತಿ ಹಾಗೂ ಪ್ರಾಣ ಕಾಪಡುವಂತೆ ಪಟ್ಟಣದ ನಾಗರೀಕರು ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರಗೆ ಗುರುವಾರ ಮನವಿ ಸಲ್ಲಿಸಿದರು.

ಇಷ್ಟು ದಿವಸ ರಾತ್ರಿ ಕಳ್ಳತನ ಮಾಡುತ್ತಿದ್ದ ಖದೀಮರು, ಈಗ ಹಗಲು ಹೊತ್ತಿನಲ್ಲಿಯೇ ಬೀಗ ಹಾಕಿರುವ ಮನೆಗಳ ಟಾರ್ಗೇಟ್ ಮಾಡಿಕೊಂಡು ಕಳ್ಳತನ ಮಾಡುತ್ತಿದ್ದಾರೆ. ಇತ್ತೀಚೆಗೆ ಹಗಲಿನಲ್ಲಿಯೇ ಕಳ್ಳರು ಮನೆಗಳಿಗೆ ನುಗ್ಗಿ ಬಂಗಾರ, ಹಣ, ವಸ್ತ್ರಗಳನ್ನು ಕದ್ದು ಒಯ್ಯುದಿದ್ದಾರೆ, ಹಣ, ಬಂಗಾರ, ಬೆಳ್ಳಿ ಸೇರಿದಂತೆ ಬೆಲೆ ಬಾಳುವ ವಸ್ತುಗಳನ್ನು ಕಳೆದುಕೊಂಡಿರುವ ಜನರು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಕುಗ್ಗಿದ್ದಾರೆ. ಹಗಲು ಹೊತ್ತಿನಲ್ಲಿಯೇ ಕಳ್ಳತನ ನಡೆಯುತ್ತಿರುವುದರಿಂದ ಹೆಣ್ಣುಮಕ್ಕಳು ಮನೆಯಲ್ಲಿ ಇರಲು ಭಯ ಪಡುತ್ತಿದ್ದಾರೆ.

ಪಟ್ಟಣದಲ್ಲಿ ಕಳ್ಳತನ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ಹೆಣ್ಣುಮಕ್ಕಳು ಹಾಗೂ ಮಕ್ಕಳು ಭಯಬೀತರಾಗಿದ್ದು. ನಿತ್ಯವು ಆತಂಕದಿಂದ ಜೀವನ ಮಾಡುವಂತಾಗಿದೆ. ಇನ್ನೂ ಮುಂದೆ ಹಣದಾಸೆಗೆ ಪ್ರಾಣಕ್ಕೂ ಸಂಚಕಾರ ತರಬಹುದೆಂದು ಮನೆಯವರು ಹೆದರಿದ್ದಾರೆ. ಪರಿಸ್ಥಿತಿ ಈಗಾದರೆ ಹೇಗೆ? ಸಾರ್ವಜನಿಕರ ಆಸ್ತಿ, ಪ್ರಾಣ ಕಾಪಾಡುವ ಜವಾಬ್ದಾರಿ ಹೊತ್ತಿರುವ ಪೋಲಿಸ್ ಇಲಾಖೆ ತಕ್ಷಣವೇ ಕಾರ್ಯ ಪ್ರವೃತ್ತರಾಗಿ ಖದೀಮರ ಹಿಡಿಯಲು ಬಲೆ ಬೀಸಬೇಕು, ಸಾರ್ವಜನಿಕರಿಗೆ ಭದ್ರತೆ ನೀಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಮನವಿ ಪತ್ರ ಸ್ವೀಕಾರ ಮಾಡಿದರು. ಸಿಪಿಐ ವಿನಾಯಕ ಇದ್ದರು.

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಬಿ.ಮಂಜುನಾಥ, ಉಪನ್ಯಾಸಕ ಟಿ.ದೇವಪ್ಪ, ಶಿಕ್ಷಕರಾದ ಅನಂತ ಕುಮಾರ, ಮಹೇಂದ್ರ ಕುಮಾರ್, ಸಿದ್ದಲಿಂಗಪ್ಪ, ಶಿವಕುಮಾರ್ ಸ್ವಾಮಿ, ವಿರುಪಾಕ್ಷಿ, ಗ್ರಾಪಂ ಮಾಜಿ ಸದಸ್ಯ ರಾಜಶೇಖರ ಸೇರಿದಂತೆ ಅನೇಕರು ಇದ್ದರು.

---

# ಅನಿಷ್ಠ ಪದ್ಧತಿ ಹೋಗಲಾಡಿಸಿದ ಮಹಾನ್ ಸಂತ ಚನ್ನವೀರಸ್ವಾಮಿ

## ಡಾ.ನಾಡೋಜ ಶ್ರೀ ಅನ್ನದಾನೇಶ್ವರ ಮಹಾಶಿವಯೋಗಿಗಳ ಅಭಿಮತ



**ಹಂಪಿ ಟೈಮ್ಸ್ ಹರಪನಹಳ್ಳಿ**

ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಚನ್ನವೀರಸ್ವಾಮಿ ಅಳವಡಿಸಿಕೊಂಡು, ಸಮಾಜದಲ್ಲಿ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಿದ ಮಹಾನ್ ಸಂತ ಎಂದು ಡಾ.ನಾಡೋಜ ಶ್ರೀ ಅನ್ನದಾನೇಶ್ವರ ಮಹಾಶಿವಯೋಗಿಗಳು ಮುಂಡರಿಗಿ ತಿಳಿಸಿದರು.

ತಾಲೂಕಿನ ಅರಸನಾಳು ಗ್ರಾಮದ ಜಂಗಮ ಕ್ಷೇತ್ರ ಲಿಂಗನಾಯಕನಹಳ್ಳಿ ಚನ್ನವೀರಸ್ವಾಮಿ ಶಾಖಾ ಮಠದ ಜೀರ್ಣೋಧ್ದಾರ ಕಾರ್ಯಕ್ರಮ ಹಾಗೂ ಪುರಾಣ ಮಂಗಲೋತ್ಸವ, ಸಾಮೂಹಿಕ ವಿವಾಹ ನೇತೃತ್ವ ವಹಿಸಿ ಬುಧವಾರ ಮಾತನಾಡಿದರು. ಮನುಷ್ಯನು ಯಾವುದೇ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡು ನಿಷ್ಠೆ, ಶ್ರಧ್ಧಾ ಭಕ್ತಿಯಿಂದ ನಿರ್ವಹಿಸಿದಲ್ಲಿ ಭಗವಂತನ ಕೃಪೆಗೆ ಪಾತ್ರನಾಗುತ್ತಾನೆ. ಚನ್ನವೀರ ಸ್ವಾಮಿಗಳು ಮನುಷ್ಯನ ಜನನವಾಗುವುದು ಪುಣ್ಯದ ಫಲವಾಗಿದೆ, ಪ್ರಗತಿಯನ್ನು ಸಾಧಿಸದ ಹೊರತು ಏನನ್ನೂ ಜಯಿಸಲಾರ ಎನ್ನುವ ತತ್ವವನ್ನು ಹೊಂದಿ ಸಮಾಜದಲ್ಲಿನ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಿ, ಸರ್ವಧರ್ಮೀಯರ ಸಮಾನತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಶರಣ ಎಂದರು.

ಗುಡ್ಡದ ವಿರಕ್ತ ಮಠ ಚನ್ನಬಸವ ಶಿವಯೋಗಿ ಸ್ವಾಮಿ ಮಾತನಾಡಿ, ಮಠಗಳೆಂದರೆ ಜೀವಂತ ಮಂದಿರಗಳಿದ್ದಂತೆ ನಾಡಿನಲ್ಲಿ ಸಾವಿರಾರು ಮಠಗಳು, ಉಚಿತವಾಗಿ ಶಿಕ್ಷಣ ಮತ್ತು ಅನ್ನದಾಸೋಹಗಳನ್ನು ನಡೆಸುತ್ತಾ ದೀನದಲಿತ ಮಕ್ಕಳ ಬಾಳಿಗೆ ಬೆಳಕನ್ನು ನೀಡುತ್ತಾ ಬಂದಿವೆ. ಈ ಶಾಖಾ ಮಠವು ನಾಡಿನಲ್ಲಿ ಶಿಕ್ಷಣ ಅನ್ನದಾಸೋಹಗಳನ್ನು ನಡೆಸುತ್ತಾ ಮುಂದಿನ ದಿನಗಳಲ್ಲಿ ಉನ್ನತ ಮಟ್ಟದಲ್ಲಿ ಬೆಳೆಯಲು ಸಹಕರಿಸಿರಿ, ಗ್ರಾಮೀಣ ಭಾಗದಲ್ಲಿ ಇಂದಿಗೂ ಜಾತಿಪದ್ಧತಿಗಳು ಜೀವಂತವಾಗಿವೆ, ಆ ರೀತಿಯ ಬಾಲಿಷ ಧೋರಣೆಯನ್ನು ಕಾಣದೆ, ಸಮಾಜದಲ್ಲಿ ಎಲ್ಲರೂ ಒಂದೇ ರೀತಿಯ ವಾತಾವರಣ ನಿರ್ಮಿಸಿಕೊಂಡು, ಶರಣ ಚನ್ನವೀರಸ್ವಾಮಿಯ ತತ್ವ ಸಿದ್ಧಾಂತಗಳನ್ನು ರೂಢಿಸಿಕೊಳ್ಳಿ, ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಶ್ರಮವಹಿಸಿ ದುಡಿಯಿರಿ ಎಂದರು.

ವಕೀಲ ಪ್ರಕಾಶ್ ಪಾಟೀಲ್ ಮಾತನಾಡಿ, ಒಂದೂವರೆ ವರ್ಷಗಳ ಸತತ ಪ್ರಯತ್ನ ಮತ್ತು ಊರಿನ ಎಲ್ಲಾ ಸಮಾಜದವರ >>3

---

# ಕೊಟ್ಟೂರು ಬಸ್ ನಿಲ್ದಾಣ ನವೀಕರಣ ಶೀಘ್ರ

## ಶಾಸಕ ನೇಮಿರಾಜ ನಾಯ್ಕ ಭರವಸೆ | ನೀತಿ ಸಂಹಿತೆ ನಂತರ 3.5 ಕೋಟಿ ವೆಚ್ಚದಲ್ಲಿ ನಿರ್ಮಾಣಕ್ಕೆ ಚಾಲನೆ

**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ನವೀಕರಣಕ್ಕೆ ಕೇಂದ್ರ ಸರ್ಕಾರ 1.75 ಕೋಟಿ, ಕೆ.ಕೆ.ಆರ್.ಡಿ.ಬಿ 1.75 ಕೋಟಿ ಒಟ್ಟು 3.5 ಕೋಟಿ ವೆಚ್ಚದ ಕಾಮಗಾರಿ ಶೀಘ್ರದಲ್ಲೇ ನೀತಿ ಸಂಹಿತೆ ಮುಗಿದ ತಕ್ಷಣವೇ ಚಾಲನೆಗೊಳ್ಳಲಿದೆ ಎಂದು ಕ್ಷೇತ್ರದ ಶಾಸಕರು ಕೆ.ನೇಮಿರಾಜ್ ನಾಯ್ಕ್ ಭರವಸೆ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಬುಧವಾರ ಸುರಿದ ಮಳೆಯಿಂದ ನಿಲ್ದಾಣ ಸಂಪೂರ್ಣ ಜಲಾವೃತ್ತವಾಗಿ ಸುಮಾರು 2 ಅಡಿಗೂ ಹೆಚ್ಚು ನೀರು ನಿಲ್ದಾಣವನ್ನು ಆವರಿಸಿತ್ತು, ಮಗುವಿಡಿದು ಮಹಿಳೆಯೊಬ್ಬರು ಬಸ್ ಇಳಿದು ಬರುವಾಗ ಕಾಲು ಜಾರಿ ಬಿದ್ದು, ನೀರು ಪಾಲಾಗುತ್ತಿದ್ದ ಮಗುವನ್ನು ತಾಯಿ ರಕ್ಷಿಸಿಕೊಂಡ ದೃಶ್ಯ ಪತ್ರಿಕೆಗಳಲ್ಲಿ, ಸಾಮಾಜಿಕ ಜಾಲ ತಾಣದಲ್ಲಿ ಬಾರಿ ವೈರಲ್ ಆಗಿದ್ದರಿಂದ ಎಚ್ಚೆತ್ತ ಶಾಸಕರು ಗುರುವಾರ ಪರಿಶೀಲಿಸಿದರು.

ತಹಶಿಲ್ದಾರ ಅಮರೇಶ್ ಜಿ.ಕೆ ಅವರನ್ನು ಸ್ಥಳಕ್ಕೆ ಕರೆದು ನಿಲ್ದಾಣ ಅಳತೆ ಹಾಗೂ ಒತ್ತವರಿ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದರು. ನಂತರ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ತುಕಾರಾಂ ಯಮನಪ್ಪ ಮಾದರ ಅವರನ್ನು ಕರೆದು ನಿಲ್ದಾಣದ



ರಾಜ ಕಾಲುವೆಯನ್ನು ಸ್ವಚ್ಛಗೊಳಿಸುವಂತೆ ತಾಕೀತು ಮಾಡಿದರು. ಕೂಡ್ಲಿಗಿ ಲೋಕೋಪಯೋಗಿ ಇಲಾಖೆ ಎಇಇ ವೆಂಕಟರಮಣ ಅವರಿಗೆ ಲೋಕೋ ಪಯೋಗಿ ಇಲಾಖೆಯಡಿಲ್ಲಿ ನೂತನ ವಾಗಿ ನಿರ್ಮಾಣ ವಾಗಿರುವ ರಾಜ ಕಾಲುವೆ ಅವೈಜ್ಞಾನಿಕ ವಾಗಿದ್ದು, ಈ ಅವ್ಯವಸ್ಥಿಗೆ ಬಹುತೇಕ ನಿಮ್ಮ ನಿರ್ಲಕ್ಷ್ಯವೇ ಕಾರಣ ಎಂದು ಅವರನ್ನು ತರಾಟೆ ತೆಗೆದುಕೊಂಡರು. ನೂತನ ವಾಗಿ ನಿರ್ಮಿಸಿರುವ ರಾಜ್ ಕಾಲುವೆಯನ್ನು ಗುತ್ತಿಗೆದಾರ ಅವೈಜ್ಞಾನಿಕವಾಗಿ ಕಾಮಗಾರಿ ಮಾಡಿದ್ದಾರೆ ಇದನ್ನು ಸರಿ ಪಡಿಸದಿದ್ದರೆ ಈ ಬಗ್ಗೆ ತನಿಖೆ ನಡಿಸಿ ಅವರನ್ನು ಕಪ್ಪು ಪಟ್ಟಿಗೆ ಸೇರಿಸುವೆ ಜೊತೆಗೆ ಅವರ ಮೇಲೆ ದೂರು ದಾಖಲಿಸುವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ತಾಲ್ಲೂಕಿನಲ್ಲಿ ಉತ್ತಮ ಮಳೆ ಆಗಿರುವ ಕಾರಣ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು ರೈತರಿಗೆ ಬೀಜ, ರಸಗೊಬ್ಬರ, ಯಂತ್ರೋಪಕರಣಗಳು ಸರಿಯಾಗಿ ಪೂರೈಕೆ ಆಗಬೇಕು. ಅಂಗಡಿಯಲ್ಲಿ ದುಪ್ಪಟ್ಟು ಮಾರಾಟ ಮಾಡದಂತೆ ಕ್ರಮ ವಹಿಸಬೇಕು.**

**– ನೇಮಿರಾಜ ನಾಯ್ಕ** ಶಾಸಕ

ಕುಡಿಯುವ ನೀರು ಸೇರಿದಂತೆ ಕೇಂದ್ರ ಸರ್ಕಾರದ ಹಲಾವಾರು ಯೋಜನೆಗಳನ್ನು ರೂಪಿಸುವುದಾಗಿ ಹೇಳಿದರು. ಮಿನಿ ವಿಧಾನಸೌದ, 100 ಬೆಡ್ ಆಸ್ಪತ್ರೆ ಕಾಮಗಾರಿ ಶೀಘ್ರದಲ್ಲೇ ಚಾಲನೆ ನೀಡುವೆವು ಎಂದುರು.

ಈ ಸಂಧರ್ಭದಲ್ಲಿ ಕೆ ಎಸ್ ಅರ್ ಟಿ ಸಿ ಕಂಟ್ರೂಲರ್ ಜಹಾಂಗೀರ್ ಸಾಹೇಬ್, ಆರೋಗ್ಯ ನಿರಿಕ್ಷಕಿ ಟಿ ಅನುಷಾ, ಸಹಾಯಕ ಇಂಜೀನಿಯರ್ ನಿಹಾರಿಕಾ ಸುಲೋಮಿ ಇತರೆ ಇಲಾಖೆ ಅಧಿಕಾರಿಗಳು. ಪ.ಪಂ ಸದಸ್ಯರು ಬಾವಿಕಟ್ಟಿ ಶಿವಾನಂದ, ಮರಬದ ನಾಗರಾಜ, ಮುಖಂಡ ಕಾಮಶೆಟ್ಟಿ ಕೊಟ್ರೇಶ್, ಡಿಶ್ ಮಂಜುನಾಥ್, ಕೆ.ಕರಿಬಸಜ್ಜನ ಗೌಡ, ಉಮೇಶ್ ಗೌಡ ಮತ್ತಿತರರು ಇದ್ದರು.





